ಸಂಪುಟ 01 | ಸಂಚಿಕೆ 185 | ಶನಿವಾರ 30 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸಗೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಹಿಂದಿ ಪತ್ರಿಕೋದ್ಯಮ ದಿನ**

ಪ್ರತಿ ವರ್ಷ ಮೇ 30 ರಂದು ಭಾರತದಲ್ಲಿ ಹಿಂದಿ ಪತ್ರಿಕೋದ್ಯಮ ದಿನ (ಹಿಂದಿ ಪತ್ರಕರಿತಾ ದಿವಸ್) ವನ್ನು ಆಚರಿಸಲಾಗುತ್ತದೆ. ಇದು ಮೇ 30, 1826 ರಂದು ಭಾರತದ ಮೊದಲ ಹಿಂದಿ ಪತ್ರಿಕೆಯಾದ "ಉದಾಂತ್ ಮಾರ್ತಾಂಡ್" (Udant Martand) ಬಿಡುಗಡೆಯಾದ ಮತ್ತು ಹಿಂದಿ ಮಾಧ್ಯಮದಲ್ಲಿ ಪತ್ರಕರ್ತರ ಕೊಡುಗೆಯನ್ನು ಗೌರವಿಸುವ ಐತಿಹಾಸಿಕ ದಿನವಾಗಿದೆ

**2) ಅಂತರಾಷ್ಟ್ರೀಯ ಆಲೂಗಡ್ಡೆ ದಿನ**

ಪ್ರತಿ ವರ್ಷ ಮೇ 30 ರಂದು ವಿಶ್ವದಾದ್ಯಂತ ಅಂತರಾಷ್ಟ್ರೀಯ ಆಲೂಗಡ್ಡೆ ದಿನವನ್ನು (International Day of Potato) ಆಚರಿಸಲಾಗುತ್ತದೆ. ಆಹಾರ ಭದ್ರತೆ, ಪೋಷಣೆ ಮತ್ತು ಕೃಷಿ ಆರ್ಥಿಕತೆಯಲ್ಲಿ ಆಲೂಗಡ್ಡೆಯ ಮಹತ್ವವನ್ನು ಸಾರಲು ವಿಶ್ವಸಂಸ್ಥೆಯು (UN) ಈ ದಿನವನ್ನು ಅಧಿಕೃತವಾಗಿ ಜಾರಿಗೆ ತಂದಿದೆ.

## ಸುಭಾಷಿತ

ದಿನಕ್ಕೆ ಒಮ್ಮೆಯಾದರೂ ನಿಮ್ಮ ಜತೆ ನೀವೇ ಮಾತನಾಡಿಕೊಳ್ಳಿ, ಇಲ್ಲವಾದರೆ ಜಗತ್ತಿನ ಅತ್ಯುತ್ತಮ ವ್ಯಕ್ತಿಯೊಂದಿಗಿನ ಸಂಭಾಷಣೆ ಕಳೆದುಕೊಳ್ಳುತ್ತೀರಿ.

ಸ್ವಾಮಿ ವಿವೇಕಾನಂದ

### ಸಿದ್ದರಾಮಯ್ಯ ಅವರ ಪರ ಬೆಂಬಲಿಗರು ಧ್ವನಿ ಎತ್ತಲಿಲ್ಲ ಎಂಬುದು ಅಪ್ರಸ್ತುತ

# ಸತೀಶ್ ಜಾರಕಿಹೊಳಿ



**ಬೆಂಗಳೂರು: ದೆಹಲಿಯಲ್ಲಾಗಿದ್ದ ಒಪ್ಪಂದದಂತೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಬೆಂಬಲಿಗರು ಸಿದ್ದರಾಮಯ್ಯ ಅವರ ಪರವಾಗಿ ಧ್ವನಿ ಎತ್ತಲಿಲ್ಲ ಎಂಬುದು ಅಪ್ರಸ್ತುತ ಎಂದು ಮಾಜಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಹುಲ್‌ಗಾಂಧಿ ಹೇಳಿದರೆ ರಾಜೀನಾಮೆ ನೀಡುವುದಾಗಿ ಸಿದ್ದರಾಮಯ್ಯ ಅವರು ಮೊದಲಿನಿಂದಲೂ ಹೇಳುತ್ತಾ ಬಂದರು. ದೆಹಲಿಯ ಸಭೆಯಲ್ಲಿ ರಾಹುಲ್‌ಗಾಂಧಿ ಸೂಚನೆ ಕೊಟ್ಟ ಬಳಿಕ ಸಿದ್ದರಾಮಯ್ಯ ಅದರಂತೆ ರಾಜೀನಾಮೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಆಪ್ತರು ಸಿದ್ದರಾಮಯ್ಯ ಅವರ ಪರವಾಗಿ ಹೈಕಮಾಂಡ್ ನಾಯಕರ ಬಳಿ ವಾದಿಸಬೇಕಿತ್ತು ಎಂಬುದು ಅಪ್ರಸ್ತುತ. ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವಾಗ ಯಾರೊಂದಿಗೂ ಚರ್ಚೆ ನಡೆಸಲಿಲ್ಲ, ಯಾರನ್ನೂ ಕೇಳಲಿಲ್ಲ.

ದೆಹಲಿಯಲ್ಲಿ ಒಪ್ಪಂದವಾಗಿದ್ದ ಬಗ್ಗೆ ಕೂಡ ನಮಗೆ ಹೇಳಲಿಲ್ಲ ಎಂದು ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ. ಸಿದ್ದರಾಮಯ್ಯ ಅವರ ವಿರುದ್ಧ ಸಹಿ ಸಂಗ್ರವಾಗಿತ್ತು ಎಂಬುದು ನಂಬಲರ್ಹವಲ್ಲ. ಯಾರೋ 37 ಜನ ಸಿದ್ದರಾಮಯ್ಯ ಅವರ ವಿರುದ್ಧ ಸಹಿ ಹಾಕಿದ್ದರೆ, ಉಳಿದ 100 ಜನರ ಅಭಿಪ್ರಾಯ ಏನೆಂಬುದು ಮುಖ್ಯವಲ್ಲವೇ? ಸಹಿ ಹಾಕಿದ 37 ಜನ ಈಗ ಹೀರೋಗಳಾಗಿದ್ದಾರೆ ಎಂದು ವ್ಯಂಗ್ಯವಾಗಿ ಹೇಳಿದರು. 2028ರ ವರೆಗೂ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪಕ್ಷಕ್ಕೆ ಅಗತ್ಯ ಸಲಹೆ ಸಹಕಾರ ಬೆಂಬಲ ನೀಡಲಿದ್ದಾರೆ. ಇದನ್ನು ನಿನ್ನೆ ನಡೆದ ಸಚಿವರ ಉಪಾಹಾರ ಸಭೆಯಲ್ಲಿ ಸಿದ್ದರಾಮಯ್ಯ ಅವರೇ ಸ್ಪಷ್ಟಪಡಿಸಿದ್ದಾರೆ.

ಅಹಿಂದ ಸಮುದಾಯದಲ್ಲಿ 200ಕ್ಕೂ ಹೆಚ್ಚು ಜಾತಿಗಳಿವೆ. ಸಿದ್ದರಾಮಯ್ಯ ನಂತರ ತಾವು ಅದನ್ನು ಮುನ್ನಡೆಸುವುದಾಗಿ ಸತೀಶ್ ಜಾರಕಿಹೊಳಿ ಹೇಳಿದರು. ಅಹಿಂದ ವರ್ಗಕ್ಕೆ ಯಾರಾದರೂ ನಾಯಕತ್ವ ನೀಡಲೇಬೇಕು. ತಾವು ಆ ಜವಾಬ್ದಾರಿ ನಿಭಾಯಿಸುವುದಾಗಿ ಸ್ಪಷ್ಟಪಡಿಸಿದರು. ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತಮೊಂದಿಗೆ ಚರ್ಚೆ ಮಾಡಿದ್ದಾರೆ. ಸಿದ್ದರಾಮಯ್ಯ ಅವರು ದೆಹಲಿಗೆ ಬಂದಿದ್ದಾರೆ. ಅವರು ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಲಿದ್ದಾರೆ ಎಂದು ತಾವು ತಿಳಿಸಿದ್ದು, ದೆಹಲಿಯಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಹೈಕಮಾಂಡ್ ಚರ್ಚೆ ನಡೆಸಿ, ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಗೊತ್ತಿಲ್ಲ. ಪಕ್ಷ ಯಾವುದೇ ಜವಾಬ್ದಾರಿ ಕೊಟ್ಟರೂ ಅದನ್ನು ನಿಭಾಯಿಸುತ್ತೇನೆ.

ಈವರೆಗೂ ತಮಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವ ಬಗ್ಗೆ ಯಾರೂ ಅಧಿಕೃತವಾಗಿ ಹೇಳಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಅಧ್ಯಕ್ಷ ಸ್ಥಾನದ ಜೊತೆಗೆ ಸಚಿವ ಸ್ಥಾನ ಬೇಕು ಎಂಬುದರ ಬಗ್ಗೆ ಸದ್ಯಕ್ಕೆ ನಾನು ಏನೂ ಹೇಳುವುದಿಲ್ಲ. ದೆಹಲಿಯಲ್ಲಿ ಸಿದ್ದರಾಮಯ್ಯ ಅವರೇ ಅದನ್ನು ನಿರ್ಧರಿಸುತ್ತಾರೆ. ಈಗಿರುವ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಮಾದ-ರಿಯಲ್ಲೇ ಪಕ್ಷ ಸಂಘಟನೆ ಮುಂದುವರೆಸುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ ಎಂದು ಹೇಳಿದರು. ಮೊದಲು ಹೊಸ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಳ್ಳಲಿ, ಅನಂತರ ಪಕ್ಷದ ಅಧ್ಯಕ್ಷ ಸ್ಥಾನದ ಬಗ್ಗೆ ಚರ್ಚೆಗಳಾಗುತ್ತವೆ.

ಹೊಸ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಹುದ್ದೆ ಇರಲಿದೆಯೋ, ಇಲ್ಲವೋ ಎಂಬುದು ತಮಗೆ ಗೊತ್ತಿಲ್ಲ ಎಂದರು.ಸಿದ್ದರಾಮಯ್ಯಅವರು ಎರಡು ವರ್ಷದ ಬಳಿಕವಾದರೂ ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸಬೇಕಿತ್ತು. ವಿದಾಯ ಸಹಜ ಎಂದು ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

## ಬೆಂಗಳೂರಲ್ಲಿ ಸರಣಿ ಅಪಘಾತ :ಇಬ್ಬರು ಸವಾರರ ಸಾವು

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ವೇಗವಾಗಿ ಬಂದ ಮಿನಿ ಬಸ್‌ವೊಂದು ನಿಯಂತ್ರಣ ತಪ್ಪಿ ಐದು ದ್ವಿಚಕ್ರ ವಾಹನಗಳಿಗೆ ಹಾಗೂ ಪಾದಚಾರಿಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಬೈಕ್ ಸವಾರರು ಮೃತಪಟ್ಟಿರುವ ಘಟನೆ ಬನಶಂಕರಿ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಾತ್ರಿ ನಡೆದಿದೆ.**



ಬನಶಂಕರಿ 2ನೇ ಹಂತದ ಕದಿರೇನಹಳ್ಳಿ ಪಾರ್ಕ್ ಸಮೀಪದ ನಿವಾಸಿ, ಸ್ಕೂಟರ್ ಸವಾರ ಉದಯಕುಮಾರ್ (63) ಮತ್ತು ಬನಶಂಕರಿ 3ನೇ ಹಂತದ ನಿವಾಸಿ, ಎಲೆಕ್ಟ್ರಿಕ್ ಸ್ಕೂಟರ್ ಸವಾರ ಸೆಲ್ವಕುಮಾರ್ (52) ಮೃತಪಟ್ಟವರು. ಅಪಘಾತದಲ್ಲಿ ಇಬ್ಬರು ಪಾದಚಾರಿಗಳು ಸೇರಿದಂತೆ ಮೂವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರಾತ್ರಿ 8.20 ರ ಸುಮಾರಿನಲ್ಲಿ ರಿಂಗ್ ರಸ್ತೆ ಕದಿರೇನಹಳ್ಳಿಯ ಎಎಂ ಆಸ್ಪತ್ರೆ ಸಮೀಪ ಅತೀ ವೇಗವಾಗಿ ಬಂದ ಮಿನಿ ಬಸ್ ಇಬ್ಬರು ಪಾದಚಾರಿಗಳು, ಮೂರು ಸ್ಕೂಟರ್‌ಗಳು ಹಾಗೂ ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆದು ಸರಣಿ ಅಪಘಾತ ಸಂಭವಿಸಿ ಇಬ್ಬರು ಸವಾರರು ಮೃತಪಟ್ಟಿದ್ದಾರೆ. ಐದು ವಾಹನಗಳು ಜಖಂಗೊಂಡಿವೆ. ಅಪಘಾತದ ಸುದ್ದಿ ತಿಳಿಯುತ್ತಿದ್ದಂತೆ ಬನಶಂಕರಿ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಗಾಯಾಳುಗಳನ್ನು ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದಾರೆ.ಬಸ್ ಬ್ರೇಕ್ ವೈಫಲ್ಯದಿಂದ ಈ ಅಪಘಾತ ಸಂಭವಿಸಿದೆ ಎಂದು ಹೇಳಲಾಗುತ್ತಿದ್ದು, ಆರ್‌ಟಿಓ ಅಧಿಕಾರಿಗಳು ಈ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಬನಶಂಕರಿ ಸಂಚಾರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

## "ರೈತ ಸಂಪರ್ಕ ಕೇಂದ್ರದ ಅವ್ಯವಸ್ಥೆ: ಶಾಸಕರಿಗೆ ದೂರು"



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ರೈತ ಸಂಪರ್ಕ ಕೇಂದ್ರದಲ್ಲಿನ ಅವ್ಯವಸ್ಥೆ ಸರಿಪಡಿಸುವಂತೆ ಒತ್ತಾಯಿಸಿ ಬುಧವಾರ ಸಂಘಟನೆಗಳ ಮುಖಂಡರು ಶಾಸಕ ಆರ್. ಬಸನಗೌಡ ತುರ್ವಿಹಾಳ ಅವರಿಗೆ ಮನವಿ ಸಲ್ಲಿಸಿದರು.**

ಮಸ್ಕಿ: ಪಟ್ಟಣದ ರೈತ ಸಂಪರ್ಕ ಕೇಂದ್ರ ಅವ್ಯವಸ್ಥೆಯ ಕೂಪವಾಗಿದೆ ಎಂದು ರೈತ ಸಂಘ, ದಲಿತ ಸೇನೆ ಸೇರಿದಂತೆ ಇತರೆ ಸಂಘಟನೆಗಳ ಮುಖಂಡರು ಬುಧವಾರ ಶಾಸಕ, ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್. ಬಸನಗೌಡ ತುರ್ವಿಹಾಳ ಅವ-ರಿಗೆ ದೂರು ನೀಡಿ ಕ್ರಮಕ್ಕೆ ಆಗ್ರಹಿಸಿದರು. ರೈತ ಸಂಪರ್ಕ ಕೇಂದ್ರದಲ್ಲಿ ಮುಂಗಾರು ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ಶಾಸಕರಿಗೆ ಮನವಿ ಸಲ್ಲಿಸಿದ ಮುಖಂಡರು, 'ರೈತ ಸಂಪರ್ಕ ಕೇಂದ್ರದಲ್ಲಿ ರೈತರಿಗೆ ಸರಿಯಾಗಿ ಮಾಹಿತಿ ನೀಡುತ್ತಿಲ್ಲ, ಅಧಿಕಾರಿಗಳು, ಸಿಬ್ಬಂದಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ.

ಇದುವರೆಗೂ ಕೇಂದ್ರದ ಕಚೇ-ರಿಗೆ ವಿದ್ಯುತ್ ಸರಬರಾಜು ಇಲ್ಲ. ರಾತ್ರಿ ಇದರ ಸುತ್ತಮುತ್ತ ಬೇರೆ ಬೇರೆ ಚಟುವಟಿಕೆಗಳು ನಡೆಯುತ್ತಿದ್ದರೂ ಸಹ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಏನೂ ಕ್ರಮ ಕೈಗೊಂಡಿಲ್ಲ' ಎಂದು ಆರೋಪಿಸಿದರು. ಕೂಡಲೇ ತಾವು ರೈತ ಸಂಪರ್ಕ ಕೇಂದ್ರವನ್ನು ಸರಿ ದಾ-ರಿಗೆ ತರಬೇಕು ಎಂದು ಮನವಿ ಮಾಡಿದರು. ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಆರ್. ಬಸನಗೌಡ ತುರ್ವಿಹಾಳ ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿ ಅವ್ಯವಸ್ಥೆ ಸರಿಪಡಿಸಲಾಗುವುದು ಎಂದರು. ರೈತಸಂಘದ ವಿಜಯ ಬಡಿಗೇರ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಹಾಜರಿದ್ದರು.

## ಅಕ್ರಮ ಮದ್ಯ ಮಾರಾಟ ತಡೆಯಲು ಪೂಲಬಾವಿ ಗ್ರಾಮಕ್ಕೆ ಅಬಕಾರಿ ಅಧಿಕಾರಿ ಲಕ್ಷ್ಮೀದೇವಿ ಭೇಟಿ ಪರಿಶೀಲನೆ .

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನ ಅಬಕಾರಿ ಇಲಾಖೆ ಕುಂಭಕರ್ಣ ನಿದ್ರೆಯಲ್ಲಿದ್ದು ಅಕ್ರಮಮದ್ಯ ಮಾರಾಟ ತಡೆಗೆ ಕ್ರಮ ಕೈಗೊಳ್ಳದೆ ಇರುವುದರಿಂದ ತಾಲೂಕಿನಲ್ಲಿ ರಾತ್ರಿ ಹಗಲು ಎನ್ನದೆ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ.**

ಎಂದು ಅಬಕಾರಿ ಇಲಾಖೆಯ ಅಧಿಕಾರಿ ಲಕ್ಷೀದೇವಿ ಇವರಿಗೆ ಮನವಿ ನೀಡಿದ ಬೆನ್ನಲ್ಲೇ ತಕ್ಷಣ ಪೂಲಬಾವಿ ಗ್ರಾಮಕ್ಕೆ ತಮ್ಮ ಸಿಬಂದಿಯೊಂದಿಗೆ ದಾವಿಸಿ ಗ್ರಾಮದ ಎಲ್ಲ ಡಬ್ಬ ಅಂಗಡಿ ಹಾಗೂ ಕಿರಾಣಿ ಅಂಗಡಿಯನ್ನು ಪರಿಶೀಲಿಸಿ ಗ್ರಾಮಸ್ಥರೊಂದಿಗೆ ಸಭೆ ನಡೆಸಿ ಎಲ್ಲ ಗ್ರಾಮದ ಅಂಗಡಿಯವ-ರಿಗೆ ಎಚ್ಚರಿಕೆ ನೀಡಿದ್ದಾರೆ . ಈ ಸಂದರ್ಭದಲ್ಲಿ ಸಬ್ ಇನ್ಸ್ಪೆಕ್ಟರ್ ಶರಣಪ್ಪ , ಸಿಬ್ಬಂದಿ ಬಸವರಾಜ್ , ಮಂಜು ಎಚ್ ಸಿ ಸೇರಿದಂತೆ ಇದ್ದರು.





## ಭಾರತದಲ್ಲಿ ಈ ಬಾರಿ ಮಳೆ ಪ್ರಮಾಣದಲ್ಲಿ ಕುಸಿತ: ಹವಾಮಾನ ಇಲಾಖೆ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಭಾರತದಲ್ಲಿ ಈ ವರ್ಷದ ನೈಋತ್ಯ ಮಾನ್ಸೂನ್ ಮಳೆಯು ದೀರ್ಘಾವಧಿಯ ಸರಾಸರಿಯ ಶೇಕಡಾ 90 ರಷ್ಟಾಗುವ ನಿರೀಕ್ಷೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.**

ಈ ಮಾನ್ಸೂನ್ ಋತುವಿನಲ್ಲಿ ಈಶಾನ್ಯವು ಸಾಮಾನ್ಯ ಮಳೆಯಾಗುವ ಸಾಧ್ಯತೆಯಿದ್ದರೂ, ದೇಶದ ಉಳಿದ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಕಚೇರಿ ತಿಳಿಸಿದೆ. ನೈಋತ್ಯ ಮಾನ್ಸೂನ್‌ನ ಎರಡನೇ ಮುನ್ಸೂಚನೆಯಲ್ಲಿ ಭಾರತೀಯ ಹವಾಮಾನ ಇಲಾಖೆ ಈ ಅವಲೋಕನಗಳನ್ನು ಮಾಡಿದೆ.



ಏಪ್ರಿಲ್ 13 ರಂದು ತನ್ನ ಮೊದಲ ಮುನ್ಸೂಚನೆಯಲ್ಲಿ, ಈ ಮಾನ್ಸೂನ್ ಋತುವಿನಲ್ಲಿ ಭಾರತವು ದೀರ್ಘಾವಧಿಯ ಸರಾಸರಿ (ಎಲ್‌ಪಿಎ) ಮಳೆಯ ಶೇಕಡಾ 92 ರಷ್ಟು ಮಳೆಯನ್ನು ವೀಕ್ಷಿಸಬಹುದು ಎಂದು ಹವಾಮಾನ ಕಚೇರಿ ಹೇಳಿತ್ತು.

## ಈದ್ಗಾ ಮೈದಾನದಲ್ಲಿ ಸಾಥಿ ಗ್ರೂಪ್ ವತಿಯಿಂದ ಅತಿ ಹೆಚ್ಚು ಅಂಕ ಗಳಿಸಿದ ಮುಸ್ಲಿಂ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ನಗರದ ಈದ್ಗಾ ಮೈದಾನದಲ್ಲಿ ಬಕ್ರಿದ್ ಹಬ್ಬದ ಅಂಗವಾಗಿ ಸಾಥಿ ಗ್ರೂಪ್ ವತಿಯಿಂದ 2025-26ನೇ ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಮುಸ್ಲಿಂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಯಿತು.**

ಬಕ್ರಿದ್ ಹಬ್ಬದ ಪ್ರಯುಕ್ತ ಈದ್ಗಾ ಮೈದಾನದಲ್ಲಿ ಸಾಮೂಹಿಕ ನಮಾಜ್ ಸಲ್ಲಿಸಿ, ದೇಶದ ಶಾಂತಿ, ಸಮಾಜದ ಸೌಹಾರ್ದತೆ ಹಾಗೂ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ವಿಶೇಷ ದುಆ ಯಾಚಿಸಿದ ಬಳಿಕ ಪ್ರತಿಭಾವಂತ ವಿದ್ಯಾರ್ಥಿಗಳನ್ನು ವೇದಿಕೆಗೆ ಆಹ್ವಾನಿಸಿ ಶಾಲು ಹೊದಿಸಿ, ಪುಷ್ಪಮಾಲೆ ಹಾಕಿ, ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.





ಈ ಸಂದರ್ಭದಲ್ಲಿ ಮಾತನಾಡಿದ ಸಾಥಿ ಗ್ರೂಪ್ ಮುಖಂಡರು, "ಶಿಕ್ಷಣವೇ ಸಮಾಜದ ನಿಜವಾದ ಶಕ್ತಿ. ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಗಳಿಸುವುದರ ಮೂಲಕ ಸಮಾಜಕ್ಕೆ ಮಾದರಿಯಾಗುತ್ತಿದ್ದಾರೆ. ಇಂತಹ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

ಮುಂದಿನ ದಿನಗಳಲ್ಲಿ ಇನ್ನಷ್ಟು ವಿದ್ಯಾರ್ಥಿಗಳು ಉನ್ನತ ಸಾಧನೆ ಮಾಡಿ ಸಮಾಜ ಹಾಗೂ ರಾಷ್ಟ್ರದ ಹೆಮ್ಮೆ ಆಗಬೇಕು," ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ವಿಭಾಗದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಸೈಯದ್ ಫೈರ್ಝಾನ್ (ಐಸಿಎಸ್‌ಇ ? 97%), ಸನಾ ತಬಸ್ಸುಮ್ (ಸಿ.ಬಿ.ಎಸ್.ಇ ? 94.4%), ಎಂ. ಆಯಿಷಾ (95.84%), ಎಸ್.ಆರ್. ಮೊಹಮ್ಮದ್ ಅಲಿ (91.20%), ಸೋನಿಯಾ (90.56%), ಸಾಬೀರಾ ಬೇಗಮ್ (90.24%) ಹಾಗೂ ನೂರ್ ಜಹಾನ್ (90.24%) ಅವರನ್ನು ಗೌರವಿಸಲಾಯಿತು. ಪಿಯುಸಿ ವಿಜ್ಞಾನ ವಿಭಾಗದಲ್ಲಿ ಎಸ್. ಮೊಹಮ್ಮದ್ ಅನಾನ್ (95.00%), ಅಬ್ದುಲ್ ಖಾದಿರ್ (94.66%), ಸನಾ ಅಶ್ರಫ್ (92.33%) ಹಾಗೂ ನಸ್ರೀನ್ (91.50%) ಅವರು ಉತ್ತಮ ಸಾಧನೆಗಾಗಿ ಸನ್ಮಾನಕ್ಕೆ ಪಾತ್ರರಾದರು.

ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಎಸ್. ಆರ್ಷಿಯಾ ತಬಸ್ಸುಮ್ (97.67%), ಸುಹಾನ ಖಾತುನ್ (96.00%), ಗೌಸಿಯಾ ಸಬಾ ಹತ್ (96.00%) ಹಾಗೂ ಆಫ್ರೋಜ್ (90.83%) ಅವರು ಅತ್ಯುತ್ತಮ ಅಂಕಗಳೊಂದಿಗೆ ಗಮನ ಸೆಳೆದರು. ಇನ್ನೂ ಪಿಯುಸಿ ಕಲಾ ವಿಭಾಗದಲ್ಲಿ ಎಂ. ತನ್ವೀರ್ ಶಾ (87.50%) ಅವರು ಸಾಧನೆ ಮಾಡಿ ಸನ್ಮಾನ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಪೋಷಕರು, ಧಾರ್ಮಿಕ ಮುಖಂಡರು, ಸಮಾಜದ ಗಣ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿ ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದರು.

ವಿದ್ಯಾರ್ಥಿಗಳ ಯಶಸ್ಸು ಇತರ ಮಕ್ಕಳಿಗೂ ಪ್ರೇರಣೆಯಾಗಲಿ ಎಂದು ಆಶಿಸಿದರು. ಬಕ್ರಿದ್ ಹಬ್ಬದ ಸಂಭ್ರಮದ ನಡುವೆ ನಡೆದ ಈ ಸನ್ಮಾನ ಸಮಾರಂಭವು ಶಿಕ್ಷಣಕ್ಕೆ ಉತ್ತೇಜನ ನೀಡುವ ಜೊತೆಗೆ ಸಮಾಜದಲ್ಲಿ ಪ್ರತಿಭೆಗಳಿಗೆ ಗೌರವ ನೀಡುವ ಉತ್ತಮ ಕಾರ್ಯವಾಗಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ವರದಿ : ಮಸೀದಿ ,ಅಬ್ದುಲ್ ಗೌಸ್, ಸಿರುಗುಪ್ಪ

## ಸಾಹಿತ್ಯ ಸಿಂಚನ

ಸ್ನೇಹಿತ

ಸ್ನೇಹಿತ ಎಂದರೆ ನೆರಳಿನಂತೆ,
ನಮ್ಮ ಜೊತೆ ನಡೆಯುವ ಬೆಳಕಿನಂತೆ?
ನಗು ಬಂದಾಗ ಜೊತೆ ನಗುವ,
ಕಷ್ಟ ಬಂದಾಗ ಕೈ ಹಿಡಿಯುವ?

ಸ್ನೇಹದ ಬಂಧ ಅಷ್ಟು ಅಮೂಲ್ಯ,
ಹಣದಿಂದ ಸಿಗದ ಅದ್ಭುತ ಮೌಲ್ಯ?
ಮನದ ಮಾತು ಹೇಳಿಕೊಳ್ಳುವ ಸ್ಥಳ,
ಸ್ನೇಹಿತನೇ ಜೀವನದ ಸಿಹಿ ಬೆಳಕು?

ಸತ್ಯ ಹೇಳುವ ಒಳ್ಳೆಯ ಗೆಳೆಯ,
ತಪ್ಪು ದಾರಿಗೆ ಹೋಗದಂತೆ ತಡೆಯ?
ಜೀವನ ಪಯಣದಲ್ಲಿ ಜೊತೆಯಾದರೆ,
ಪ್ರತಿ ಕ್ಷಣವೂ ಹಬ್ಬದ ಸಂಭ್ರಮವೇ?

ಸ್ನೇಹಿತನಿಗೆ ಸಾವಿರ ಧನ್ಯವಾದಗಳು,
ನನ್ನ ಜೀವನದಲ್ಲಿ ಬಂದಿದ್ದಕ್ಕಾಗಿ?

ಅಮರೇಶ್

# ನಿಜವಾದ ಕುರಬಾನಿ ಎಂದರೆ ನಮ್ಮೊಳಗಿನ ಕೆಟ್ಟ ಗುಣಗಳ ತ್ಯಾಗ: ಮೌಲಾನಾ ಅಫ್ತಾಬ್ ಕರೆ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಕುರಬಾನಿ ಎಂದರೆ ಕೇವಲ ಪ್ರಾಣಿಯನ್ನು ಬಲಿ ಕೊಡುವುದಲ್ಲ. ತಮ್ಮ ಅಹಂಕಾರ, ಕೋಪ, ದ್ವೇಷ, ಸ್ವಾರ್ಥ ಹಾಗೂ ಕೆಟ್ಟ ಅಭ್ಯಾಸಗಳನ್ನು ಅಲ್ಲಾಹನ ಮಾರ್ಗದಲ್ಲಿ ತ್ಯಾಗ ಮಾಡುವುದೇ ನಿಜವಾದ ಕುರಬಾನಿ ಎಂದು ಜಾಮಿಯಾ ಮಸೀದಿಯ ಮೌಲಾನಾ ಅಫ್ತಾಬ್ ಹೇಳಿದರು.**

ಪಟ್ಟಣದ ತಾಳಿಕೋಟೆ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಬಕ್ರೀದ್ ಅಂಗವಾಗಿ ನಡೆದ ಮುಸ್ಲಿಮರ ಸಾಮೂಹಿಕ ಪ್ರಾರ್ಥನೆಯ ಸಂದರ್ಭದಲ್ಲಿ ಅವರು ಮಾತನಾಡಿದರು. ನಾವು ವರ್ಷಗಳಿಂದ ಕುರಬಾನಿ ಮಾಡುತ್ತಿದ್ದೇವೆ. ಆದರೆ ನಮ್ಮ ಜೀವನ, ನಡತೆ, ಮಾತು ಹಾಗೂ ಸ್ವಭಾವದಲ್ಲಿ ಬದಲಾವಣೆ ಆಗಿದೆಯೇ ಎಂಬುದನ್ನು ಪ್ರತಿಯೊಬ್ಬರೂ ಆತ್ಮಪರಿಶೀಲನೆ ಮಾಡಬೇಕು. ಕುರಬಾನಿಯ ನಿಜವಾದ ಅರ್ಥ ನಮ್ಮೊಳಗಿನ ಕೆಟ್ಟ ಗುಣಗಳನ್ನು ತ್ಯಜಿಸುವುದಾಗಿದೆ" ಎಂದು ಹೇಳಿದರು.

ಸಮಾಜದಲ್ಲಿ ಪರಸ್ಪರ ಪ್ರೀತಿ, ಸಹೋದರತ್ವ ಮತ್ತು ಕ್ಷಮೆಯ ಮನೋಭಾವ



ಬೆಳೆಸುವ ಅಗತ್ಯವಿದೆ ಎಂದು ತಿಳಿಸಿದ ಅವರು, "ಯಾರಾದರೂ ನಮ್ಮನ್ನು ನೋಯಿಸಿದ್ದರೆ ಅವರನ್ನು ಅಲ್ಲಾಹನಿಗಾಗಿ ಕ್ಷಮಿಸುವ ಗುಣ ಬೆಳೆಸಿಕೊಳ್ಳಬೇಕು. ಅದುವೇ ಅತ್ಯಂತ ದೊಡ್ಡ ಕುರಬಾನಿ" ಎಂದು ಹೇಳಿದರು. ಇಸ್ಲಾಂ ಧರ್ಮದಲ್ಲಿ ಪಾವಿತ್ರ್ಯ ಮತ್ತು ಸ್ವಚ್ಛತೆಗೆ ವಿಶೇಷ ಮಹತ್ವ ನೀಡಲಾಗಿದೆ. ಕುರಬಾನಿ ಬಳಿಕ ಪರಿಸರ ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ. ಸಾರ್ವಜನಿಕ ಸ್ಥಳಗಳಲ್ಲಿ ಅಸ್ವಚ್ಛತೆ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ಸಾಮಾಜಿಕ ಜಾಲತಾಣಗಳ ದುರುಪಯೋಗದ ಬಗ್ಗೆ ಎಚ್ಚರಿಕೆ ನೀಡಿದ ಅವರು, ಕುರಬಾನಿಯ ಫೋಟೊ ಹಾಗೂ ವಿಡಿಯೊಗಳನ್ನು ಅನಗತ್ಯವಾಗಿ ಹಂಚಿಕೊಳ್ಳದೇ ಧಾರ್ಮಿಕ ಭಾವನೆಗಳಿಗೆ ಗೌರವ ನೀಡಬೇಕು ಎಂದರು. ಯುವಕರು ಇಸ್ಲಾಂನ ತ್ಯಾಗ, ಶಿಸ್ತು, ಸೇವಾ ಮನೋಭಾವ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. ಬಕ್ರೀದ್ ಹಬ್ಬದ ಅಂಗವಾಗಿ ಪಟ್ಟಣದ ಸಂದಲ್ ಮಸೀದಿ, ಬಾಗಬಾನ್ ಮಸೀದಿ, ಮದೀನಾ ಮಸೀದಿ, ಮಕ್ಕಾ ಮಸೀದಿ, ಮೀನಾ ಮಸೀದಿ, ಅಬೂಬಕರ್ ಮಸೀದಿ, ಅಫಾತ್ ಮಸೀದಿ, ಉಮರ್ ಫಾರೂಖ್ ಮಸೀದಿ, ಮುಸ್ತಫಾ ಮಸೀದಿ, ಆಕ್ಸಾ ಮಸೀದಿ, ತಯ್ಯಬಾ ಮಸೀದಿ ಹಾಗೂ ಬಿಲಾಲ್ ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆಗಳು ನಡೆದವು. ಬಳಿಕ ಜಾಮಿಯಾ ಮಸೀದಿ ಸಮೀಪದಿಂದ ಭಕ್ತರು ತಕ್ಬೀರ್ ಘೋಷಣೆಗಳೊಂದಿಗೆ ಈದ್ಗಾ ಮೈದಾನಕ್ಕೆ ಆಗಮಿಸಿದರು. ಸಾಮೂಹಿಕ ಪ್ರಾರ್ಥನೆಯ ನಂತರ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡ ಮುಸ್ಲಿಂ ಬಾಂಧವರು, ದೇಶದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಮೃದ್ಧಿ ನೆಲೆಸಲೆಂದು ಪ್ರಾರ್ಥಿಸಿದರು. ಬಡವರಿಗೆ ಮಾಂಸ ಹಂಚುವ ಮೂಲಕ ಹಬ್ಬದ ಸಂಭ್ರಮವನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಡಾ. ಎ.ಎಂ. ಮುಲ್ಲಾ, ಡಿ.ಡಿ. ಬಾಗವಾನ್, ಅಲೀಮ್ ಮೊಮೀನ್, ಅಬ್ದುಲ್ ಗನಿ ನದಾಫ್, ಉಸ್ಮಾನ್ ಗಣಿ ಮುಲ್ಲಾ, ಅಬ್ದುಲ್ ಗಫೂರ್ ಮಕಾನದಾರ್, ಗೊಳಸಂಗಿ, ಹುಸೇನ ಮುಲ್ಲಾ, ಸದ್ದಾಂ ಕುಂಟೋಜಿ, ಮುನ್ನಾಳ, ಮಹಿಬೂಬ ಎನ್.ಬಿ., ವಹಾಬ್ ಮೊಮೀನ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದರು.

## 3 ತಿಂಗಳೊಳಗೆ ಕಾಯ್ದಿರಿಸಿದ ತೀರ್ಪುಗಳನ್ನು ಪ್ರಕಟಿಸುವಂತೆ ಸುಪ್ರೀಂ ನಿರ್ದೇಶನ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಮಹತ್ವದ ಬೆಳವಣಿಗೆ ಯೊಂದರಲ್ಲಿ, ಸುಪ್ರೀಂ ಕೋರ್ಟ್ ಎಲ್ಲಾ ಹೈಕೋರ್ಟ್‌ಗಳಿಗೆ ಆದೇಶ ಕಾಯ್ದಿರಿಸಿದ 3 ತಿಂಗಳೊಳಗೆ ತೀರ್ಪು ಪ್ರಕಟಿಸುವಂತೆ ನಿರ್ದೇಶನ ನೀಡಿದೆ. ವಿಳಂಬವು ಅರ್ಜಿದಾರರಿಗೆ ಸರಿಪಡಿಸಲಾಗದ ನಷ್ಟವನ್ನು ಉಂಟುಮಾಡುತ್ತದೆ ಎಂಬುದನ್ನು ಹೇಳಿರುವ ಸುಪ್ರೀಂ ಕೋರ್ಟ್, ದೇಶಾದ್ಯಂತದ ಹೈಕೋರ್ಟ್‌ಗಳು ಆದೇಶ ಕಾಯ್ದಿರಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ತೀರ್ಪುಗಳನ್ನು ಪ್ರಕಟಿಸುವಂತೆ ನಿರ್ದೇಶನ ನೀಡಿದೆ.**



ವೈಯಕ್ತಿಕ ಸ್ವಾತಂತ್ರ್ಯದ ಪ್ರಕರಣಗಳಲ್ಲಿ ತ್ವರಿತ ನಿರ್ಧಾರಗಳು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿರುವ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜೋಯಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು, ಜಾಮೀನು ಅರ್ಜಿಗಳ ಆದೇಶಗಳನ್ನು ಅದೇ ದಿನ ಪ್ರಕಟಿಸಬೇಕು. ಅವುಗಳನ್ನು ಕಾಯ್ದಿರಿಸಿದರೆ, ಅವುಗಳನ್ನು ಮರುದಿನ ಪ್ರಕಟಿಸಬೇಕು ಮತ್ತು ಅಪ್‌ಲೋಡ್ ಮಾಡಬೇಕು ಎಂದು ಹೇಳಿದೆ. ಜಾಮೀನು ಆದೇಶವನ್ನು ಜೈಲು ಅಧಿಕಾರಿಗಳಿಗೆ ತ್ವರಿತವಾಗಿ ತಿಳಿಸಬೇಕು. ಜಾಮೀನು ಅಥವಾ ಶಿಕ್ಷೆಯ ಅಮಾನತು ಆದೇಶವನ್ನು ಪ್ರಕಟಿಸಿದ ತಕ್ಷಣ ಜೈಲು ಅಧಿಕಾರಿಗಳಿಗೆ ಮಾಹಿತಿ ಕೊಡಬೇಕು ಮತ್ತು ವಿಚಾರಣಾಧೀನ/ಶಿಕ್ಷೆಗೊಳಗಾದವರನ್ನು ಅದೇ ದಿನ ಅಥವಾ ಹೆಚ್ಚೆಂದರೆ ಮರುದಿನ ಬಿಡುಗಡೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ತಿಳಿಸಿದೆ. ಸಂವಿಧಾನದ 142 ನೇ ವಿಧಿಯ ಅಡಿಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸುವಾಗ ಸುಪ್ರೀಂ ಕೋರ್ಟ್ ಈ ನಿರ್ದೇಶನಗಳನ್ನು ನೀಡಿದೆ. ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠವು ಎಲ್ಲಾ ಹೈಕೋರ್ಟ್‌ಗಳು ಮೂರು ತಿಂಗಳೊಳಗೆ ಬಾಕಿ ಇರುವ ತೀರ್ಪುಗಳನ್ನು ಪ್ರಕಟಿಸುವಂತೆ ನಿರ್ದೇಶಿಸಿದೆ. ತೀರ್ಪು ತಡವಾಗಿ ಬಂದರೆ ಅದೇ ದಿನ ಅಥವಾ ಮರುದಿನ ಜಾಮೀನು ಆದೇಶಗಳನ್ನು ಪ್ರಕಟಿಸಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ನಿಯಮಿತ ಜಾಮೀನು ಆದೇಶಗಳ ಕುರಿತು ತಕ್ಷಣದ ಮಾಹಿತಿ ನೀಡುವಂತೆ ಕೆಳ ನ್ಯಾಯಾಲಯಗಳಿಗೆ ನಿರ್ದೇಶನ ನೀಡಿದೆ. ಜಾಮೀನು ಪಡೆದ ವಿಚಾರಣಾಧೀನ ಕೈದಿಗಳನ್ನು ಅಗತ್ಯ ವಿಧಿವಿಧಾನಗಳಿಗೆ ಒಳಪಟ್ಟು ಅದೇ ದಿನ ಬಿಡುಗಡೆ ಮಾಡಬೇಕು ಎಂದು ಅದು ಹೇಳಿದೆ. ಎಲ್ಲಾ ತೀರ್ಪುಗಳನ್ನು ಅವು ಪ್ರಕಟವಾದ 24 ಗಂಟೆಗಳ ಒಳಗೆ ಹೈಕೋರ್ಟ್ ವೆಬ್‌ಸೈಟ್‌ಗಳಿಗೆ ಅಪ್‌ಲೋಡ್ ಮಾಡಬೇಕು ಎಂದು ಸಲಹೆ ನೀಡಿದೆ. ತೀರ್ಪು ಪ್ರಕಟಿಸುವ ದಿನಾಂಕವನ್ನು ತೀರ್ಪಿನ ದಿನಾಂಕವೆಂದು ಪರಿಗಣಿಸಲಾಗುತ್ತದೆ. ಹೈಕೋರ್ಟ್‌ಗಳು ಸಾವಿರಾರು ಜನರು ನ್ಯಾಯವನ್ನು ಬಯಸುವ ಪ್ರಾಥಮಿಕ ಸಂಸ್ಥೆಗಳಾಗಿದ್ದು, ಸಮಯಕ್ಕೆ ಸರಿಯಾಗಿ ತೀರ್ಪುಗಳನ್ನು ಪ್ರಕಟಿಸುವುದು ಅತ್ಯಗತ್ಯ ಎಂದು ಹೇಳಿದೆ. ಈ ನಿರ್ದೇಶನಗಳು ಯಾವುದೇ ನ್ಯಾಯಾಧೀಶರು ಅಥವಾ ಸಂಸ್ಥೆಯ ಮೇಲೆ ಯಾವುದೇ ಆಕ್ಷೇಪಣೆಯನ್ನು ಹೇರುವ ಉದ್ದೇಶವನ್ನು ಹೊಂದಿಲ್ಲ. ಜಾರ್ಖಂಡ್ ಹೈಕೋರ್ಟ್‌ನಲ್ಲಿ ತೀರ್ಪುಗಳ ವಿಳಂಬಕ್ಕೆ ಸಂಬಂಧಿಸಿದ ವಿಷಯದಲ್ಲಿ ಸುಪ್ರೀಂ ಕೋರ್ಟ್ ಈ ಆದೇಶ ನೀಡಿದೆ.

# ಜಿ.ಪಂ ವತಿಯಿಂದ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಆಹ್ವಾನ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ 13 ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಿಗೆ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.**

ಈ ಹುದ್ದೆಗೆ ಸ್ಥಳೀಯ ಗ್ರಾಮ ಪಂಚಾಯತಿಯ ಸಂಬಂಧಿಸಿದ ಮೀಸಲಾತಿ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಅರ್ಜಿಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಜಿಲ್ಲಾ ಪಂಚಾಯತಿ ರಾಯಚೂರು ವೆಬ್‌ಸೈಟ್ ವಿಳಾಸ: ದಠಿಡಿಚುಛಿಃಣಡಿ. ಇಚಿಡಿ.ಟುಛಿ.ಎಟ ನಲ್ಲಿ ಸಲ್ಲಿಸಬಹುದಾಗಿದೆ. ಸೂಚನೆಗಳನ್ನು ಹಾಗೂ ನೇಮಕಾತಿ ಅಧಿಸೂಚನೆಯನ್ನು ಡೌನ್‌ಲೋಡ್ ಮಾಡಿಕೊಂಡು ಕೂಲಂಕುಷವಾಗಿ ಓದಿ ಅರ್ಥೈಸಿಕೊಂಡು ಅದರಂತೆ ಸೂಕ್ತ ಸಿದ್ಧತೆಯೊಂದಿಗೆ ಜೂನ್ 10ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಶೈಕ್ಷಣಿಕ ಅರ್ಹತೆ: ದ್ವಿತೀಯ ಪದವಿ ಪೂರ್ವ ಪರೀಕ್ಷೆ (ಪಿಯುಸಿ) ಯಲ್ಲಿ ಉತ್ತೀರ್ಣವಾಗಿರತಕ್ಕದ್ದು, ಮತ್ತು ಸರ್ಟಿಫಿಕೇಶನ್ ಕೋರ್ಸ್ ಇನ್ ಲೈಬ್ರರಿಸೈನ್ಸ್ ನಲ್ಲಿ ಪ್ರಮಾಣ ಪತ್ರ ಪಡೆದಿರತಕ್ಕದ್ದು ಹಾಗೂ ಕನಿಷ್ಠ ಮೂರು ತಿಂಗಳ ಕಂಪ್ಯೂಟರ್ ಕೋರ್ಸ್‌ನಲ್ಲಿ ಉತ್ತೀರ್ಣವಾಗಿರಬೇಕು. ಆಯ್ಕೆವಿಧಾನ: ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಗರಿಷ್ಠ ಅಂಕಗಳು/ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ ಎಂದು ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಆಗಿರುವ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿವೃತ್ತಿ ಸೈನಿಕರಿಂದ ಜೂನ್ .06ರವರೆಗೆ ನೇರ ಸಂದರ್ಶನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಮಾಜಿ ಸೈನಿಕರನ್ನು ಗುತ್ತಿಗೆ ಆಧಾರದ ಮೇಲೆ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಗೆ ಸಂದರ್ಶನ ಮೂಲಕ ನೇಮಕಾತಿ ನಡೆಸುತ್ತಿದ್ದು, ಆಸಕ್ತರು ದಿನಾಂಕ: 29-05-2026 ರಿಂದ**

## ನೇರ ಸಂದರ್ಶನ

**6-06-2026ರವರೆಗೆ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಸಂದರ್ಶನ ಭಾಗವಹಿಸಬಹುದಾಗಿದೆ.**

ಈ ಸಂದರ್ಶನದಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಮಾಜಿ ಸೈನಿಕರು ತಮ್ಮ ಗುರುತಿನ ಚೀಟಿ ಮತ್ತು ಸೇನಾ ಸೇವಾ ಪುಸ್ತಕಗಳೊಂದಿಗೆ ಸಂದರ್ಶನದಕ್ಕೆ ಹಾಜರಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪಿ.ಎಸ್.ರಮೇಶ, ಉಪ ನಿರ್ದೇಶಕರು ಹಾಗೂ ಬಂದೀಖಾನೆಗಳ ಮುಖ್ಯ ಅಧೀಕ್ಷಕರು ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಅಕಾಡೆಮಿ, ಕಾಳಿದಾಸ ರಸ್ತೆ, ಗಾಂಧಿನಗರ, ಮಹಾಬೋಧಿ ಸೊಸೈಟಿಯ ಪಕ್ಕ ಫ್ರೀಡಂ ಪಾರ್ಕ್ ಬೆಂಗಳೂರು ಮೊಬೈಲ್ ಸಂಖ್ಯೆ: 9632496560 ಅಥವಾ 9480806400 ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಕಲಬುರ್ಗಿಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮನೆಯಲ್ಲಿ ಮಹಾಮನೆ' ಕಾರ್ಯಕ್ರಮ ಸರಳತೆ ಶರಣರ ಧ್ಯೇಯ :ಎಸ್.ಎ. ಬೇವಿನಗಿಡದ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಪಟ್ಟಣದ ವಿಶ್ವಕರ್ಮ ಬಡಾವಣೆಯಲ್ಲಿರುವ ಮಹಾಬಲೇಶ್ವರ ಗಡೇದ ಅವರ ಮನೆಯಲ್ಲಿ ಈಚೆಗೆ ನಡೆದ 1057ನೇ "ಮಹಾಮನೆ" ಕಾರ್ಯಕ್ರಮದಲ್ಲಿ ಹಿರಿಯರಾದ ಶಿವಲಿಂಗಪ್ಪ ಗಡೇದ ಹಾಗೂ ಬಿ.ಎಂ. ರಾಂಪೂರ ಅವರನ್ನು ಸನ್ಮಾನಿಸಲಾಯಿತು.**

ಇದೇ ವೇಳೆ "ಕಾಯಕ ಯೋಗಿ" ಪ್ರಶಸ್ತಿ ಪಡೆದ ಮಹಾಬಲೇಶ್ವರ ಗಡೇದ ಅವರಿಗೂ ಗೌರವ ಸಮರ್ಪಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಮಹಾಮನೆ ಬಳಗದ ಅಧ್ಯಕ್ಷ ಎಸ್.ಎ. ಬೇವಿನಗಿಡದ, ಯಜ್ಞ, ಯಾಗ ಹಾಗೂ ಆಡಂಬರದ ಆಚರಣೆಗಳ ಮೂಲಕ ಜನಸಾಮಾನ್ಯರಿಗೆ ನಿಲುಕದಂತಾಗಿದ್ದ ದೇವರ ಅಸ್ತಿತ್ವವನ್ನು 12ನೇ ಶತಮಾನದ ಬಸವಾದಿ ಶರಣರು ತಮ್ಮ ನಡೆ, ನುಡಿ ಮತ್ತು ವಚನಗಳ ಮೂಲಕ ಸರಳಗೊಳಿಸಿದರು ಎಂದು ಹೇಳಿದರು. 12ನೇ ಶತಮಾನವು ಕನ್ನಡ ನಾಡಿನ ಸಾಮಾಜಿಕ ಹಾಗೂ ಧಾರ್ಮಿಕ ಚಿಂತನೆಗಳಿಗೆ ಮಹತ್ವದ ತಿರುವು ನೀಡಿದ ಯುಗವಾಗಿದೆ. ಶ್ರೀಮಂತರ ಸ್ವತ್ತಾಗಿದ್ದ ದೇವರು, ಆಚಾರ-ವಿಚಾರ ಮತ್ತು ಆಧ್ಯಾತ್ಮಿಕ ನೆಲೆಯನ್ನು ಶರಣರು ಬದಲಿಸಿದರು.



ಓದು ಬರಹ ತಿಳಿಯದ ಜನಸಾಮಾನ್ಯರು ಹಾಗೂ ಮಹಿಳೆಯರೂ ಶ್ರೇಷ್ಠ ಮಟ್ಟದ ವಚನಗಳನ್ನು ರಚಿಸಿ, ಅದೇ ಮಾರ್ಗದಲ್ಲಿ ಬದುಕು ರೂಪಿಸಿಕೊಂಡರು ಎಂದು ಅವರು ಅಭಿಪ್ರಾಯಪಟ್ಟರು. ಸಭೆಯಲ್ಲಿ ಶರಣಬಸಪ್ಪ ಗಡೇದ ಮಾತನಾಡಿದರು. ಕಾರ್ಯಕ್ರಮದಲ್ಲಿ ದಾನಪ್ಪ ನಾಗಠಾಣ, ಅಮರೇಶ ಗೂಳಿ, ಎನ್. ಎಸ್. ಹಿರೇಮಠ, ಬಸವರಾಜ ನಾಲತವಾಡ, ಬಸವರಾಜ ಕೋರಿ, ಎಸ್.ಎಚ್. ಪಾಟೀಲ, ಎಚ್.ಬಿ. ದಳವಾಯಿ, ಸಂಗಣ್ಣ ಕಂಬ್ಯಾಣಿ, ಎಸ್.ಆರ್. ಗೌಡರ, ಎಂ.ಎಸ್. ಬಿರಾದಾರ, ಚಂದ್ರಶೇಖರ ಪ್ಯಾಟಿಗೌಡರ, ಶ್ರೀಶೈಲ ಕತ್ತಿ, ಕೆ.ಆರ್. ಕಾಮಟೆ, ಬಿ.ಎಂ. ಪಲ್ಲೇದ, ಎನ್.ಎಸ್. ಮಠ, ಜಿ.ಆರ್. ಕಲಬುರ್ಗಿ,

ಈರಣ್ಣ ಶಿರವಾಳ, ಅಶೋಕ ರೇವಡಿ, ನಾಗಭೂಷಣ ನಾವದಗಿ, ರವಿ ಗೂಳಿ, ಶ್ರೀಶೈಲ ಮರೋಳ, ಅಮರೇಶ ಐಹೊಳೆ, ಬಸಲಿಂಗಪ್ಪ ಕಟ್ಟಿ, ಎಂ.ಬಿ. ಪಾಟೀಲ, ದೇವೇಂದ್ರ ಪತ್ತಾರ, ಡಾ. ಬೋರಮ್ಮ ಪೊಲೀಸ್ ಪಾಟೀಲ, ಸುಲೋಚನ ಸಜ್ಜನ ಸೇರಿದಂತೆ ಹಲವರು ಭಾಗವಹಿಸಿದ್ದರು. ಸಂಗಮೇಶ ಶಿವಣಗಿ, ಬಾಪುಗೌಡ ಪಾಟೀಲ, ಎನ್.ಆರ್. ಮೊಕಾಶಿ ಹಾಗೂ ಎಸ್. ಎಸ್. ಹುನಗುಂದ ಬಸವ ನೆನಹು ಮತ್ತು ಪ್ರಾರ್ಥನೆ ನಡೆಸಿದರು. ಮಲ್ಲಿಕಾರ್ಜುನ ಗಡೇದ ಸ್ವಾಗತಿಸಿದರು. ಬಿ.ಎಸ್. ಮೇಟಿ ಕಾರ್ಯಕ್ರಮ ನಿರೂಪಿಸಿದರು.

# ಶ್ರೀ ಪುಟ್ಟರಂಗಶೆಟ್ಟಿ ಅವರಿಗೆ ತಕ್ಷಣ ಸಚಿವ ಸ್ಥಾನ ನೀಡಬೇಕು: ದೇವದುರ್ಗ ತಾಲೂಕು ಉಪ್ಪಾರ ಸಮಾಜ ಸೇವಾ ಸಂಘದ ಆಗ್ರಹ

ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ತಾಲೂಕು ಉಪ್ಪಾರ ಸಮಾಜ ಸೇವಾ ಸಂಘವು ರಾಜ್ಯ ಸರ್ಕಾರವನ್ನು ಒತ್ತಾಯಿಸಿ, ಉಪ್ಪಾರ ಸಮಾಜದ ಏಕೈಕ ಶಾಸಕರಾದ ಶ್ರೀ ಪುಟ್ಟರಂಗಶೆಟ್ಟಿ ಅವರಿಗೆ ತಕ್ಷಣವೇ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿದೆ.**

ದೇವದುರ್ಗ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಮುಖಂಡರು, ಕರ್ನಾಟಕ ರಾಜ್ಯದಲ್ಲಿ ಉಪ್ಪಾರ ಸಮಾಜಕ್ಕೆ ಸಮರ್ಪಕ ರಾಜಕೀಯ ಪ್ರಾತಿನಿಧ್ಯ ಸಿಗಬೇಕು ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಅವಕಾಶ ಕಲ್ಪಿಸಬೇಕಾದರೆ, ಸಮಾಜದ ಪರವಾಗಿ ಧ್ವನಿಯಾಗಿರುವ ಶಾಸಕ ಶ್ರೀ ಪುಟ್ಟರಂಗಶೆಟ್ಟಿಯವರಿಗೆ ಸಚಿವ ಸ್ಥಾನ ನೀಡುವುದು ಅಗತ್ಯವೆಂದು ಅಭಿಪ್ರಾಯಪಟ್ಟರು.



ಸಂಘದ ಪದಾಧಿಕಾರಿಗಳು ಹಾಗೂ ಸಮಾಜದ ಮುಖಂಡರು ಜಂಟಿ ಮನವಿ ಪತ್ರದ ಮೂಲಕ ತಮ್ಮ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ.

ಮುಖ್ಯ ಬೇಡಿಕೆಗಳು ಮತ್ತು ಅಭಿಪ್ರಾಯಗಳು:

ನಿಷ್ಠಾವಂತ ಸೇವೆಗೆ ಮನ್ನಣೆ: ಶ್ರೀ ಪುಟ್ಟರಂಗಶೆಟ್ಟಿಯವರು ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ ಹಾಗೂ ನಾಯಕರಾಗಿ ಸೇವೆ ಸಲ್ಲಿಸುತ್ತಿದ್ದು, ಅವರ ದೀರ್ಘಕಾಲದ ಸೇವೆಯನ್ನು ಪರಿಗಣಿಸಿ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಆಗ್ರಹಿಸಲಾಯಿತು.

ಜನಸಂಖ್ಯೆಗೆ ತಕ್ಕ ರಾಜಕೀಯ ಪ್ರಾತಿನಿಧ್ಯ: ಕರ್ನಾಟಕದಲ್ಲಿ ಉಪ್ಪಾರ ಸಮಾಜದ ಜನಸಂಖ್ಯೆ ಸುಮಾರು 30 ರಿಂದ 40 ಲಕ್ಷವಿದ್ದು, ಇಷ್ಟೊಂದು ದೊಡ್ಡ ಸಮುದಾಯಕ್ಕೆ ಸೂಕ್ತ ರಾಜಕೀಯ ಸ್ಥಾನಮಾನ ಸಿಕ್ಕಿಲ್ಲ ಎಂದು ಮುಖಂಡರು ಅಸಮಾಧಾನ ವ್ಯಕ್ತಪಡಿಸಿದರು.

ಹಿಂದುಳಿದ ಸಮಾಜಕ್ಕೆ ನ್ಯಾಯ: ಉಪ್ಪಾರ ಸಮಾಜವು ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದು, ಸರ್ಕಾರದ ಯೋಜನೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕಾದರೆ ಸಮಾಜದ ಪ್ರತಿನಿಧಿಗೆ ಸಚಿವ ಸ್ಥಾನ ನೀಡುವುದು ಅಗತ್ಯ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಉಪ್ಪಾರ ಸಮಾಜದ ತಾಲೂಕು ಅಧ್ಯಕ್ಷರಾದ ಶ್ರೀ ಭೀಮಣ್ಣ ಬುದ್ದಿನ್ನಿ, ಕಾರ್ಯದರ್ಶಿ ಶ್ರೀ ತಿಮ್ಮಾರೆಡ್ಡಿ ಪೂಜಾರಿ ಮಾನಸಗಲ್, ಹಿರಿಯ ಮುಖಂಡರಾದ ಶ್ರೀ ಮುಕ್ಕಣ್ಣ ವಕೀಲರು ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು. ಹಾಜರಿದ್ದ ಇತರ ಪ್ರಮುಖರು: ಶಾವಂತಗಲ್ ರಂಗಪ್ಪ, ಇರಬಗೇರಾ ನಾಗಪ್ಪ ಉಪ್ಪಾರ, ದೇವದುರ್ಗ ವೆಂಕೋಬ ಪೂಜಾರ, ಜಾಲಹಳ್ಳಿ ರಂಗಪ್ಪ ಬಂಡಿ, ಜಾಲಹಳ್ಳಿ ವೆಂಕಟೇಶ ಪೂಜಾರಿ, ದೇವದುರ್ಗ ಹನುಮಂತ್ರಾಯ ಜಂಬಲದಿನ್ನಿ, ಹನುಮಂತ ಗಣಜಿಲಿ, ಮೌನೇಶ ಬೂದೂರು, ಬಸವರಾಜ ಗಬ್ಬೂರು, ಗಂಗಣ್ಣ ಗಬ್ಬೂರು, ಅಂಜನೇಯ ಪಂದ್ಯಾನ್, ಬಸವರಾಜ ಡಾಕ್ಟರ್ ಬುದ್ದಿನ್ನಿ, ಅಮರೇಶ ನಗರಗುಂಡ, ತಿರುಪತಿ ಸಲ್ಕಾಪೂರ ಮಾನಸಗಲ್, ದೇವಪ್ಪ ಸಲ್ಕಾಪೂರ, ರಂಗಪ್ಪ ಸಲ್ಕಾಪೂರ ಹಾಗೂ ಹನುಮಂತ ಉಪ್ಪಾರ ದೇವದುರ್ಗ ಸೇರಿದಂತೆ ಸಮಾಜದ ಹಲವಾರು ಪ್ರಮುಖರು ಭಾಗವಹಿಸಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ನೇಮಕಾತಿ ಪ್ರಕಟಣೆ

ಜಿಲ್ಲಾ ಪರಿಷತ್ ರಾಯಚೂರು ನೇಮಕಾತಿ 2026–13 ಮೇಲ್ವಿಚಾರಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 29, 2026 ಜಿಲ್ಲಾ ಪರಿಷತ್ ರಾಯಚೂರು ನೇಮಕಾತಿ 2026: 13 ಮೇಲ್ವಿಚಾರಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಪರಿಷತ್ ರಾಯಚೂರು ಮೇ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ರಾಯಚೂರು ? ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 10–ಜೂನ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 20–05–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03–ಜೂನ್–2026 ಅಧಿಕೃತ ವೆಬ್‌ಸೈಟ್: cetonline.karnataka.gov.in

## ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲರು, ಸಿದ್ದರಾಮಯ್ಯನವರು ಈಗ ಹಂಗಾಮಿ ಸಿಎಂ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕರ್ನಾಟಕದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ. ಮುಖ್ಯಮಂತ್ರಿಯವರ ರಾಜೀನಾಮೆಯೊಂದಿಗೆ ರಾಜ್ಯ ಸಚಿವ ಸಂಪುಟವು ವಿಸರ್ಜನೆಯಾಗಿದೆ. ಈ ಬಗ್ಗೆ ಲೋಕಭವನದಿಂದ ಅಧಿಕೃತ ಆದೇಶ ಹೊರಡಿಸಲಾಗಿದೆ. ಭಾರತ ಸಂವಿಧಾನದ 164(1) ನೇ ವಿಧಿಯ ಅಡಿಯಲ್ಲಿ ನನಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕದ ರಾಜ್ಯಪಾಲರಾದ ನಾನು, ಕರ್ನಾಟಕದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದೇನೆ ಮತ್ತು ಅವರ ನೇತೃತ್ವದ ಸಚಿವ ಸಂಪುಟವನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಸರ್ಜಿಸಿದ್ದೇನೆ ಎಂದು ರಾಜ್ಯಪಾಲರು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.**



ಹಂಗಾಮಿ ಮುಖ್ಯಮಂತ್ರಿ: ಹೊಸ ಸರ್ಕಾರ ರಚನೆಯಾಗುವವರೆಗೆ ಅಥವಾ ಮುಂದಿನ ವ್ಯವಸ್ಥೆಯವರೆಗೆ, ಸಿದ್ದರಾಮಯ್ಯ ಅವರು ಹಂಗಾಮಿ ಮುಖ್ಯಮಂತ್ರಿಯಾಗಿ ಮುಂದುವರಿಯಲು ರಾಜ್ಯಪಾಲರು ಸೂಚನೆ ನೀಡಿದ್ದಾರೆ. ಈ ಪ್ರಕ್ರಿಯೆಯು ಸಾಂವಿಧಾನಿಕವಾಗಿ ಸರ್ಕಾರವೊಂದು ಬದಲಾಗುವಾಗ ಅನುಸರಿಸುವ ಸಾಮಾನ್ಯ ಕ್ರಮವಾಗಿದೆ. ಸಚಿವ ಸಂಪುಟ ವಿಸರ್ಜನೆ ಎಂಬ ಪದ ಬಳಸಲಾಗಿದೆ. ಅಂ–ದರೆ, ಮುಖ್ಯಮಂತ್ರಿಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದ ಎಲ್ಲಾ ಸಚಿವರ ಹುದ್ದೆಗಳು ಕೂಡ ಕೊನೆಗೊಳ್ಳುತ್ತವೆ. ಸಚಿವ ಸಂಪುಟ ವಿಸರ್ಜನೆಯ ನಂತರ, ರಾಜ್ಯದಲ್ಲಿ ತಾತ್ಕಾಲಿಕ ಆಡಳಿತ ವ್ಯವಸ್ಥೆ ಹೇಗೆ ಸಾಗಬೇಕು ಎಂಬುದನ್ನು ರಾಜ್ಯಪಾಲರು ನಿರ್ಧರಿಸುತ್ತಾರೆ. ಆದರೆ ಇಲ್ಲಿ ನೀಡಿರುವ ಮಾಹಿತಿಯಲ್ಲಿ ಮುಂದಿನ ಹಂತಗಳ ಬಗ್ಗೆ ಯಾವುದೇ ವಿವರ ಇಲ್ಲ. ಕೊಟ್ಟಿರುವ ಮಾಹಿತಿ ಪ್ರಕಾರ, ಮುಖ್ಯಮಂತ್ರಿಗಳ ರಾಜೀನಾಮೆ, ರಾಜ್ಯಪಾಲರ ಅಂಗೀಕಾರ ಮತ್ತು ಸಚಿವ ಸಂಪುಟ ವಿಸರ್ಜನೆ ಇವಿಷ್ಟೇ ವಿಷಯಗಳು ಸ್ಪಷ್ಟವಾಗಿ ಕಾಣಿಸುತ್ತದೆ. ರಾಜ್ಯಪಾಲರು ರಾಜಧಾನಿಯಲ್ಲಿ ಇಲ್ಲದ ಕಾರಣ, ಅವರ ಅನುಪಸ್ಥಿತಿಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಗುರುವಾರ ತಮ ರಾಜೀನಾಮೆ ಪತ್ರವನ್ನು ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗೆ ಹಸ್ತಾಂತರಿಸಿದ್ದರು. ರಾಜೀನಾಮೆ ಪತ್ರವನ್ನು ಕಾರ್ಯದರ್ಶಿಗಳು ಸ್ವೀಕರಿಸಿದ್ದರೂ, ಸಂವಿಧಾನದ ನಿಯಮಾವಳಿಗಳ ಪ್ರಕಾರ ರಾಜ್ಯಪಾಲರು ಖುದ್ದಾಗಿ ಸಹಿ ಮಾಡಬೇಕಿತ್ತು. ಕರ್ನಾಟಕ ರಾಜಕೀಯ ನಾಟಕೀಯ ತಿರುವು ಪಡೆದುಕೊಂಡಿದ್ದು, ಸೂಕ್ಷ್ಮವಾಗಿ ನಿರ್ವಹಿಸಲಾದ ಅಧಿಕಾರ ವರ್ಗಾವಣೆಯ ಭಾಗವಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿನ್ನೆ ತಮ ಉತ್ತರಾಧಿಕಾ–ರಿಯಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಘೋಷಿಸಿ, ಬಳಿಕ ಅಧಿಕೃತವಾಗಿ ರಾಜೀನಾಮೆ ಸಲ್ಲಿಸಿದ್ದರು. ಇದರೊಂದಿಗೆ ಅವರ ಎರಡನೇ ಅವಧಿಯ ಸಿಎಂ ಆಡಳಿತಕ್ಕೆ ತೆರೆ ಬಿದ್ದಿದೆ. ಒಂದೇ ಒಂದು ಸಾಲಿನ ರಾಜೀನಾಮೆ ಪತ್ರ: ಸಿದ್ದರಾಮಯ್ಯ ಅವರ ರಾಜೀನಾಮೆ ಪತ್ರ ಬಹಳ ಚಿಕ್ಕದಾಗಿದ್ದು, ಒಂದೇ ಸಾಲಿನಲ್ಲಿ ಬರೆಯಲಾಗಿದೆ ಎನ್ನುವುದು ವಿಶೇಷ. ಅವರು ರಾಜ್ಯಪಾಲ–ರಿಗೆ ಬರೆದ ಪತ್ರದಲ್ಲಿ, ಗೌರವಾನ್ವಿತ ಸರ್, ನಾನು ಕರ್ನಾಟಕದ ಮುಖ್ಯಮಂತ್ರಿ ಹುದ್ದೆಯಿಂದ ನನ್ನ ರಾಜೀನಾಮೆಯನ್ನು ಸಲ್ಲಿಸುತ್ತಿದ್ದೇನೆ. ದಯವಿಟ್ಟು ಅದನ್ನು ಸ್ವೀಕರಿಸಲು ವಿನಂತಿ. ಸಾದರವಾಗಿ, ನಿಮ ವಿಶ್ವಾಸಿ, ಸಿದ್ದರಾಮಯ್ಯ ಎಂದು ಸರಳವಾಗಿ ತಮ ಇಚ್ಛೆಯನ್ನು ತಿಳಿಸಿದ್ದಾರೆ. ಈ ರಾಜೀನಾಮೆ ಪತ್ರದಲ್ಲಿ ಅವರು ಯಾವುದೇ ಕಾರಣಗಳನ್ನು ವಿವರಿಸಿಲ್ಲ, ಕೇವಲ ತಮ ರಾಜೀನಾಮೆಯನ್ನು ಸಲ್ಲಿಸುತ್ತೇನೆ ಎಂದು ತಿಳಿಸಿ, ಅದನ್ನು ಸ್ವೀಕರಿಸಲು ವಿನಂತಿ ಮಾಡಿದ್ದಾರೆ. ಅವರ ಪತ್ರದ ಶೈಲಿ ಬಹಳ ಸರಳ, ಸಂಕ್ಷಿಪ್ತ ಮತ್ತು ಅಧಿಕೃತವಾಗಿದೆ.

# ಜಾಲಹಳ್ಳಿಯಲ್ಲಿ 'ಅಂತರರಾಷ್ಟ್ರೀಯ ಮುಟ್ಟಿನ ನೈರ್ಮಲ್ಯ ದಿನಾಚರಣೆ–2026

## 'ಮುಟ್ಟಿನ ಸ್ನೇಹಿ ಗ್ರಾಮ ಅಭಿಯಾನ' ಯಶಸ್ವಿಯಾಗಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಮಹಿಳೆಯರು ಹಾಗೂ ಹೆಣ್ಣುಮಕ್ಕಳು ಮುಟ್ಟಿನ ಸಂದರ್ಭದಲ್ಲಿ ಎದುರಿಸುವ ಆರೋಗ್ಯ ಮತ್ತು ನೈರ್ಮಲ್ಯ ಸಂಬಂಧಿತ ಸವಾಲುಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಜಾಲಹಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ 'ಅಂತರರಾಷ್ಟ್ರೀಯ ಮುಟ್ಟಿನ ನೈರ್ಮಲ್ಯ ದಿನಾಚರಣೆ – 2026' ಹಾಗೂ 'ಮುಟ್ಟಿನ ಸ್ನೇಹಿ ಗ್ರಾಮ ಅಭಿಯಾನ' ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು.**





KHPT ಟಾಸ್ಕ್ ಫೋರ್ಸ್ ಕಮಿಟಿ ವತಿಯಿಂದ ಆಯೋಜಿಸಲಾದ ಈ ಕಾರ್ಯಕ್ರಮಕ್ಕೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಯಚೂರು ಇವರ ಸಹಯೋಗ ನೀಡಿದರು. ಕಾರ್ಯಕ್ರಮದ ಅಂಗವಾಗಿ ಜಾಲಹಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯದಿಂದ ವಾಲ್ಮೀಕಿ ವೃತ್ತದವರೆಗೆ ಜಾಗೃತಿ ಜಾಥಾ ನಡೆಸಲಾಯಿತು.

ಬಳಿಕ ವಿದ್ಯಾರ್ಥಿಗಳಿಂದ ಮುಟ್ಟಿನ ನೈರ್ಮಲ್ಯದ ಕು–ರಿತು ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಗ್ರಾಮ ಪಂಚಾಯತ್ ಅಧ್ಯಕ್ಷರಾದ ವಿಜಯಲಕ್ಷ್ಮಿ ವೆಂಕುಬಾ ತೋಟದ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ವೀರೇಶ್ ಅರಕೇರಿ, ಜಾಲಹಳ್ಳಿ ಪಿ.ಎಸ್.ಐ ವೈಶಾಲಿ ಜಳಕಿ, KHPT-ಟಾಸ್ಕ್ ಫೋರ್ಸ್ ಕಮಿಟಿ ಉಪಾಧ್ಯಕ್ಷ ಅಬ್ದುಲ್ ರಹಮಾನ್ ಖುರೇಶಿ, NRLM ಪ್ರತಿನಿಧಿ ಶರಣಮ್ಮ, ಗ್ರಾಮ ಪಂಚಾಯತ್ ಅಕೌಂಟೆಂಟ್ ಅಯ್ಯಪ್ಪ ಹಾಗೂ ಏಲೂಕಖಿ ತಾಲೂಕು ಸಂಯೋಜಕಿ ಪದ್ಮಾವತಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮುಟ್ಟಿನ ನೈರ್ಮಲ್ಯದ ಮಹತ್ವ, ವೈಯಕ್ತಿಕ ಸ್ವಚ್ಛತೆ, ಮಹಿಳೆಯರ ಆರೋಗ್ಯ ರಕ್ಷಣೆ ಹಾಗೂ ಹೆಣ್ಣುಮಕ್ಕಳಿಗೆ ಕುಟುಂಬ ಮತ್ತು ಸಮಾಜದಿಂದ ಸಿಗಬೇಕಾದ ಬೆಂಬಲದ ಕುರಿತು ವಿವರವಾಗಿ ಚರ್ಚಿಸಲಾಯಿತು. ಗ್ರಾಮಗಳನ್ನು 'ಮುಟ್ಟಿನ ಸ್ನೇಹಿ ಗ್ರಾಮ'ಗಳಾಗಿ ರೂಪಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಧಿಕಾ–ರಿಗಳು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಪಿ.ಎಸ್.ಐ ವೈಶಾಲಿ ಜಳಕಿ ಹಾಗೂ KHPT-ಟಾಸ್ಕ್ ಫೋರ್ಸ್ ಕಮಿಟಿ ಉಪಾಧ್ಯಕ್ಷ ಅಬ್ದುಲ್ ರಹಮಾನ್ ಖುರೇಶಿ ಅವರು, ಮಹಿಳೆಯರ ಆರೋಗ್ಯದ ಬಗ್ಗೆ ಸಮಾಜದಲ್ಲಿ ಮುಕ್ತ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾ–ರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಮಹಿಳೆಯರು ಹಾಗೂ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಅಕ್ಕ ಕೆಫೆ ಸಹಕಾರಿ; ಶರಣಬಸವ ಕೆಸರಟ್ಟಿ



ನೈಜ್ಯ ದೆಸೆ ನ್ಯೂಸ್

**ರಾಯಚೂರು: 'ಗ್ರಾಮೀಣ ಭಾಗದ ಮಹಿಳೆಯ–ರಿಗೆ ಆರ್ಥಿಕ ಸಹಕಾರ ಒದಗಿಸುವುದರ ಜೊತೆಗೆ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಗುಣಮಟ್ಟದ ಆಹಾರ ನೀಡುವ ಉದ್ದೇಶದಿಂದ 'ಅಕ್ಕ ಕೆಫೆ' ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ' ಎಂದು ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಶರಣಬಸವ ಕೆಸರಟ್ಟಿ ಹೇಳಿದರು.**

ನಗರದ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲಾ ಪಂಚಾಯಿತಿ, ಕೌಶಲಾಭಿವೃದ್ಧಿ, ಜೀವನೋಪಾಯ ಮತ್ತು ಉದ್ಯಮಶೀಲತೆ ಇಲಾಖೆ ವತಿಯಿಂದ ಅಕ್ಕ ಕೆಫೆ ನಿರ್ವಹಣೆ ಮಾಡುವ ಸ್ವಸಹಾಯ ಗುಂಪಿನ ಸದಸ್ಯರಿಗಾಗಿ ಹಮ್ಮಿಕೊಂಡಿದ್ದ ಒಂದು ದಿನದ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಜಿಲ್ಲೆಯಲ್ಲಿ ಈಗಾಗಲೇ ಲಿಂಗಸುಗೂರು ಹಾಗೂ ರಾಯಚೂರು ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಕ್ಕ ಕೆಫೆಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ. ಇದರಿಂದ ಹಲವು ಸ್ವ–ಸಹಾಯ ಗುಂಪಿನ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿದ್ದಾರೆ ಎಂದು ತಿಳಿಸಿದರು.

ಸಿಂಧನೂರು ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಜಿಲ್ಲಾ ಪಂಚಾಯಿತಿ ಕಚೇರಿ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಇನ್ನೂ 10 ಅಕ್ಕ ಕೆಫೆಗಳನ್ನು ಆರಂಭಿಸಲಾಗುತ್ತಿದ್ದು, ಕೆಫೆ ನಿರ್ವಹಣೆ ಕುರಿತು ತರಬೇತಿ ಪಡೆಯುವುದು ಅತ್ಯವಶ್ಯ ಎಂದರು. ಅಕ್ಕ ಕಫೆಗಳಲ್ಲಿ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಕನಿಷ್ಠ ಬಾಡಿಗೆ ಹಾಗೂ ಗ್ಯಾಸ್ ಸಿಲೆಂಡರ್ ವೆಚ್ಚವನ್ನು ಮಹಿಳೆಯರು ಭರಿಸಬೇಕಿದ್ದು, ಕೆಫೆ ನಿರ್ಮಾಣ, ಗ್ಯಾಸ್ ಸ್ಟವ್ ಹಾಗೂ ಇತರ ಉಪಕರಣಗಳನ್ನು ಜಿಲಾ ಪಂಚಾಯಿತಿಯಿಂದಲೇ ನೀಡಲಾಗುತ್ತಿದೆ–ಎಂದರು. ತಾ.ಪಂ. ಇಒ ಚಂದ್ರಶೇಖರ ಪವಾರ್ ಮಾತನಾಡಿದರು. ತರಬೇತುದಾರ ನಾಗರಾಜ, ಸ್ತ್ರೀಶಕ್ತಿ ಒಕ್ಕೂಟಗಳ ಸಂಚಾಲಕಿ ಶ್ರೀದೇವಿ ಸೇ–ರಿದಂತೆ ಅನೇಕ ಮಹಿಳೆಯರು ಉಪಸ್ಥಿತರಿದ್ದರು.

# ಆಕಸ್ಮಿಕ ವಿದ್ಯುತ್ ತಗುಲಿ 20 ವರ್ಷದ ಯುವಕ ಸಾವು

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಅಮರೇಶ್ ರಾಠೋಡ್ ತಂದೆ ರಾಮಣ್ಣ ರಾಠೋಡ್ 20 ವರ್ಷದ ಯುವಕ ಆಕಸ್ಮಿಕ ವಿದ್ಯುತ್ ತಗುಲಿ ಮೃತಪಟ್ಟ ಹಾಲಬಾವಿ ತಾಂಡದ ಯುವಕನಾಗಿದ್ದಾನೆ.**



ಅಮರೇಶ ರಾಠೋಡ್ ತಂದೆ ರಾಮಣ್ಣ ಈತನು ಮನೆ ಹಿಂದೆ ಜೋರಾಗಿ ಶಬ್ದ ಕೇಳಿದಾಗ ಮನೆ ಹಿಂದೆ ಏನಾಯಿತೆಂದು ನೋಡಲು ಹೋದಾಗ ಕಂಬದ ಮೇಲಿರುವ ವೈರಗಳಲ್ಲಿ, ಬೆಂಕಿ ಹತ್ತುತ್ತಿಕೊಂಡಿದ್ದು ಅಲ್ಲಿಂದ ಗಾಬರಿಗೊಂಡು ಕೂಗಾಡಿದಾಗ ಏನಾಯಿತೆಂದು ಮನೆಯವರೆಲ್ಲರೂ ನೋಡಲಾಗಿ ನನ್ನ ಮಗನಾದ ಅಮರೇಶ ರಾಠೋಡ್ ಈತನು ನನ್ನ ಮನೆ ಹಿಂದೆ ಇರುವ ಕಂಬದ ಹತ್ತಿರ ಮೂರ್ಛೆ ಬಿದ್ದಿದ್ದು ನಾವು ಹೋಗಿ ನಿನಗೆ ಏನಾಗಿದೆ ಎಂದು ಕೇಳಿದಾಗ ನನಗೆ ಕರೆಂಟ್ ಶರ್ಟ್ ಹೊಡೆದಿದೆ. ಇದರಿಂದ ನನಗೆ ಮೇಲೆಳಲು ಆಗುವುದಿಲ್ಲಾ.

ನಿವೆಲ್ಲರೂ ಈಚೆ ಬರಬೇಡಿ ಇಲ್ಲಿ ಕರೆಂಟ್ ರಾಂಗ್ ಕಲೆಕ್ಷನ ಆಗಿ ಕರೆಂಟ್ ವೈರಗಳಿಗೆ ಬೆಂಕಿ ತಗುಲಿರುವ ಹಾಗೆ ಆಗಿರುವುದ–ರಿಂದ ನೀವು ಯಾರೂ ನನ್ನನ್ನು ಮುಟ್ಟಬೇಡಿ ಎನ್ನುತ್ತಾ ಅಲ್ಲಿಯೇ ಸಾವನ್ನಪ್ಪಿರುತಾನೆ. ಈ ವಿಷಯವನ್ನು ನಾವು ನಮ್ಮ ಊರಿನ ಹಿರಿಯರಿಗೆ ತಿಳಿಸಿ, ನನ್ನ ಮಗನಿಗೆ ಆಟೋದಲ್ಲಿ ಹಾಕಿಕೊಂಡು ಲಿಂಗಸಗೂರಿನ ಸರಕಾರಿ ಸಾರ್ವಜನಿಕ ಆಸ್ಪತ್ರೆ ತಂದು ತೋರಿಸಿದಾಗ ಆಸ್ಪತ್ರೆಯ ವೈದ್ಯರು ಈ ವ್ಯಕ್ತಿ ಮೃತಪಟ್ಟಿದ್ದಾನೆ ಎಂದಾಗ ನಾವು ನಮ್ಮ ಕುಟುಂಬದವರ ಜೊತೆಗೆ ಹಾಗೂ ನಮ್ಮ ಊರಿನ ಹಿರಿಯರನ್ನು ವಿಚಾರಿಸಿ ತಡವಾಗಿ ಠಾಣೆಗೆ ಬಂದು ದೂರನ್ನು ನೀಡಿದ್ದೇನೆಂದು ಆ ಯುವಕನ ತಂದೆ ಕೊಟ್ಟ ದೂ–ರಿನನ್ವಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆಂದು ತಿಳಿದು ಬಂದಿದೆ.

ಈ ಘಟನೆಯ ನಂತರ ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ತಾಲೂಕು ಅಧ್ಯಕ್ಷರಾದ ವೆಂಕಟೇಶ್ ಎನ್ ರಾಥೋಡ್ ಜಿಲ್ಲಾ ಉಪಾಧ್ಯಕ್ಷರಾದ ಲಾಲಪ್ಪ ಡಿ ರಾಥೋಡ್ ರವರು ಜೆಸ್ಕಾಂ ಎಂ ಡಿ ಯವರಿಗೆ ದೂರವಾಣಿ ಕರೆ ಮುಖಾಂತರ ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಊರಿನ ಹಿರಿಯರಾದ ವಿಠ್ಠಲ್ ಪವಾರ್ ಅಂಬರೀಶ್ ರಾಥೋಡ್ ಈಶ್ವರ್ ವಕೀಲರು ಮುಂತಾದವರು ಹಾಜರಿದ್ದರು.

# ಮಾವಿನ ಹಣ್ಣು ಮಾರಾಟಕ್ಕೆ ಹಾಪ್‌ಕಾಮ್ಸ್ ನಿಂದ 'ರೈತರ ಅಂಚೆ' ಕಾರ್ಯಕ್ರಮಕ್ಕೆ ನಾಳೆ ಚಾಲನೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಹಾಪ್‌ಕಾಮ್ಸ್ ಮತ್ತು ಭಾರತೀಯ ಅಂಚೆ ಸಹಯೋಗದಲ್ಲಿ ರೈತರ ಅಂಚೆ ಎಂಬ ವಿನೂತನ ಆನ್‌ಲೈನ್ ಮಾರಾಟ ಜಾಲ ವಿಸ್ತರಣಾ ಕಾರ್ಯಕ್ರಮಕ್ಕೆ ನಾಳೆ ಚಾಲನೆ ನೀಡಲಾಗುತ್ತಿದೆ. ಪ್ರಧಾನ ಅಂಚೆ ಕಚೇರಿ (ಜಿಪಿಒ)ಯ ಆರನೇ ಮಹಡಿಯ ಅಂಚೆ ಇಲಾಖೆಯ ಸಭಾಂಗಣದಲ್ಲಿ ನಾಳೆ ಬೆಳಿಗ್ಗೆ 11 ಗಂಟೆಗೆ ರೈತರ ಅಂಚೆ ಆನ್‌ಲೈನ್ ಮಾರಾಟ ಜಾಲಕ್ಕೆ ಚಾಲನೆ ದೊರೆಯಲಿದೆ.**



ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರದ ವಿಸ್ತೀರ್ಣಕ್ಕೆ ಅನುಗುಣವಾಗಿ ಎಲ್ಲಾ ಬಡಾವಣೆಗಳಲ್ಲೂ ಹಾಪ್‌ಕಾಮ್ಸ್ ಮಾರಾಟ ಮಳಿಗೆಗಳು ಇಲ್ಲ. ಹೀಗಾಗಿ ಎಲ್ಲಾ ಗ್ರಾಹಕರಿಗೆ ಹಾಪ್‌ಕಾಮ್ಸ್‌ನ ತಾಜಾ ಹಣ್ಣು ಮತ್ತು ತರಕಾರಿಗಳನ್ನು ಮನೆಬಾಗಿಲಿಗೆ ತಲುಪಿಸಿ ಸೌಲಭ್ಯ ವಿಸ್ತರಿಸುವ ದೃಷ್ಟಿಯಿಂದ ಅಂಚೆ ಇಲಾಖೆ ಸಹಯೋಗದಲ್ಲಿ ರೈತರ ಅಂಚೆ ಎಂಬ ಹೊಸ ಆನ್‌ಲೈನ್ ವ್ಯಾಪಾರ ಯೋಜನೆಯನ್ನು ಪರಿಚಯಿಸಲಾಗುತ್ತಿದೆ ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ಎ.ಎಸ್.ಚಂದ್ರೇಗೌಡ ಹಾಗೂ ವ್ಯವಸ್ಥಾಪಕ ನಿರ್ದೇಶಕ ಮಿರ್ಜಿ ಉಮೇಶ ಶಂಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಪ್‌ಕಾಮ್ಸ್ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಗ್ರಾಹಕರು ಲಾಗ್ ಇನ್ ಆಗಿ ಬೇಕಾಗುವ ಹಣ್ಣು, ತರಕಾರಿಗಳನ್ನು ಆಯ್ಕೆ ಮಾಡಿ ಆನ್‌ಲೈನ್‌ನಲ್ಲಿ ಹಣ ಪಾವತಿಸಿ ಆರ್ಡರ್ ಮಾಡಿದಲ್ಲಿ 24 ಗಂಟೆಯೊಳಗಾಗಿ ಭಾರತೀಯ ಅಂಚೆ ಇಲಾಖೆಯು ಪತ್ರಗಳನ್ನು ತಲುಪಿಸುವಂತೆಯೇ ಗ್ರಾಹಕರ ಮನೆ ಬಾಗಿಲಿಗೆ ಹಣ್ಣು ಮತ್ತು ತರಕಾರಿಗಳನ್ನು ತಲುಪಿಸುತ್ತದೆ ಎಂದಿದ್ದಾರೆ. ಪ್ರಸ್ತುತ ಮಾವು ಮೇಳ ಚಾಲ್ತಿಯಲ್ಲಿದ್ದು, ನೈಸರ್ಗಿಕವಾಗಿ ಮಾಗಿಸಿದ ವಿವಿಧ ತಳಿಗಳ ಉತ್ಕೃಷ್ಟ ಮಾವಿನ ಹಣ್ಣುಗಳು, 3 ಕೆಜಿ ಹಾಗೂ 5 ಕೆಜಿ ಬಾಕ್?ಸಗಳಲ್ಲಿ ಲಭ್ಯವಿದ್ದು, ಆನ್‌ಲೈನ್‌ನಲ್ಲಿ ಖರೀದಿಸಬಹುದಾಗಿದೆ. ಇದರಿಂದ ಗ್ರಾಹಕರಿಗೆ ರೈತರಿಂದ ಖರೀದಿಸಿದ ತಾಜಾ ಹಣ್ಣು, ತರಕಾರಿಗಳು ದೊರೆಯಲಿದ್ದು, ಬಹು ಆಯ್ಕೆಯ ವಿವಿಧ ಹಣ್ಣು, ತರಕಾರಿಗಳು ದೊರೆಯಲಿವೆ.

ಗ್ರಾಹಕರು ತಾವಿರುವ ಸ್ಥಳದಿಂದಲೇ ಅನುಕೂಲವಾದ ವೇಳೆಯಲ್ಲಿ ಖರೀದಿಸಿ ಸಮಯ ಉಳಿತಾಯ ಮಾಡಬಹುದಾಗಿದೆ. ವ್ಯವಹಾರ ಆನ್‌ಲೈನ್‌ನಲ್ಲಿರುವುದರಿಂದ ಪಾರದರ್ಶಕವಾಗಿರುತ್ತದೆ ಎಂದು ಅವರು ತಿಳಿಸಿದ್ದಾರೆ.

# ಜಿಲ್ಲಾ ಕಾರಾಗೃಹದಲ್ಲಿ ವಿಶ್ವ ಸ್ಕಿಜೋಫ್ರೇನಿಯಾ ದಿನ

## ಮಾನಸಿಕ ರೋಗಗಳ ಗುಣಪಡಿಸುವಿಕೆ ಇರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಿ.

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮೆದುಳಿನಲ್ಲಿ ರಾಸಾಯನಿಕ ಪ್ರಕ್ರಿಯೆಗಳಿಂದ ಉಂಟಾಗುವ ಏರಿಳಿತಗಳು ಅಥವಾ ಜೀವನದ ಆಕಸ್ಮಿಕ ಘಟನೆಯಿಂದ ಉಂಟಾಗುವ ಮಾನಸಿಕ ತೊಂದರೆಗಳನ್ನು ಸಕಾಲದಲ್ಲಿ ಸೂಕ್ತ ಔಷಧೋಪಚಾರದಿಂದ ಗುಣಪಡಿಸಬಹುದಾಗಿದೆ ಎಂದು ಮನೋರೋಗ ತಜ್ಞ ಡಾ ಮನೊಹರ ಪತ್ತಾರ ತಿಳಿಸಿದರು.**



ರಾಯಚೂರು ಜಿಲ್ಲಾ ಕಾರಾಗೃಹ ಮತ್ತು ಸುಧಾರಣಾ ಕೇಂದ್ರದಲ್ಲಿ ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾನಸಿಕ ಆರೋಗ್ಯ ವಿಭಾಗ ಮತ್ತು ಜಿಲ್ಲಾ ಕಾರಾಗೃಹ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಸ್ಕಿಜೋಪ್ರಿನಿಯಾ ದಿನವನ್ನು ಆಚರಿಸಲಾಯಿತು. ಉಪನ್ಯಾಸ ನೀಡಿದ ಡಾ ಮನೋಹರ ವೈ ಪತ್ತಾರ, ಸ್ಕಿಜೋಫ್ರಿನಿಯಾ ಒಂದು ಮಾನಸಿಕ ರೋಗ, ಈ ರೋಗ ಸುಮಾರು 18 ರಿಂದ 25 ವಯಸ್ಸಿನ ಜನರಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಖಾಯಿಲೆ ಹೊಂದಿದ ವ್ಯಕ್ತಿಯ ನಡವಳಿಕೆ, ವಿಚಾರಗಳು ಮತ್ತು ಆಲೋಚನೆಗಳು ಏರುಪೇರಾಗಿರುತ್ತವೆ.

ಈ ಖಾಯಿಲೆ ಬಗ್ಗೆ ಸಾಮಾನ್ಯ ಜನರಲ್ಲಿ ಸಾಕಷ್ಟು ತಪ್ಪು ನಂಬಿಕೆಗಳು ಉದಾಹರಣೆಗೆ–ದೆವ್ವ ದೇವರಕಾಟ ಮಾಟ ಮಾಯ ಮಂತ್ರದ ಮೂಲಕ ಬರುವ ಖಾಯಿಲೆ ಎಂದು ತಿಳಿದುಕೊಂಡಿ ರುತ್ತಾರೆ ಅಲ್ಲದೇ ಖಾಯಿಲೆ ಬಗ್ಗೆ ಸಾಕಷ್ಟು ಸಾಮಾಜಿಕ ಕಳಂಕವು ಇದೆ. ಈ ಎಲ್ಲಾ ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸಿ ಸಾಮಾಜಿಕ ಕೌಂಕವನ್ನು ನಿಲ್ಲದೆ, ಸೂಕ್ತ ಸಮಯದಲ್ಲಿ ಚಿಕಿತ್ಸೆ ಯನ್ನು ಪಡೆದು ಗುಣಮುಖರಾಗಿ ಒಳ್ಳೆಯ ಜೀವನ ನಡೆಸಬೇಕೆಂದು ತಿಳಿಸುವುದೇ ಈ ಕಾರ್ಯಕ್ರಮದ ಉದ್ದೇಶ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರಗೃಹದ ಅಧಿಕ್ಷಕರಾದ ಅನಿತಾ ಹಿರೇಮನಿ ಮಾತನಾಡುತ್ತಾ ಯಾವುದೋ ಮಾನಸಿಕ ಒತ್ತಡದಲ್ಲಿ ಗೊತ್ತಿದ್ದೋ ಗೊತ್ತಿಲ್ಲದೇ ತಪ್ಪು ಮಾಡಿರುವ ವ್ಯಕ್ತಿಗಳು ಆ ಒತ್ತಡಗಳನ್ನು ಬದಿಗೊತ್ತಿ ನಡವಳಿಕೆಯನ್ನು ಸರಿಪಡಿಸಿಕೊಂಡು ಕಾರಾಗೃಹದಿಂದ ಹೊರಹೋಗಿ ತಮ್ಮ ಕೌಟುಂಬಿಕ ಜೀವನವನ್ನು ಉತ್ತಮ ಪಡಿಸಿಕೊಳ್ಳಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾರಗೃಹ ಜೈಲರ್, ಐ. ಎಸ್. ಹಿರೇಮಠ, ಸಹಾಯಕ ಜೈಲರ್ ಸಾವಿತ್ರಿ, ಡಿಎಮ್‌ಎಚ್‌ಪಿ ಸಿಬ್ಬಂದಿಗಳಾದ ಗಂಗಮ್ಮ, ಸುವರ್ಣಾ, ಭಾರತಿ, ಮಂಜುಳಾ ಮತ್ತು ಮಹಮ್ಮದ ಅಲಿ, ಅರುಣ್ ಕುಮಾರ ಕೆ, ದೀಪಾ ಎಸ್ ಎಲ್, ಮುತ್ತುರಾಜ್ ಹಾಗೂ ಕಾರಗೃಹ ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ರೆಫ್ರಿಜರೇಶನ್ ಮತ್ತು ಏರ್ ಕಂಡೀಷನಿಂಗ್ ಟೆಕ್ನಿಷಿಯನ್

ರೆಫ್ರಿಜರೇಶನ್ ಮತ್ತು ಏರ್ ಕಂಡೀಷನಿಂಗ್ ಟೆಕ್ನಿಷಿಯನ್ (Mechanic RAC) ಐಟಿಐ ಕೋರ್ಸ್ 2 ವರ್ಷಗಳ ಅವಧಿಯ ಎನ್‌ಸಿವಿಟಿ (NCVT) ಮಾನ್ಯತೆ ಪಡೆದ ತಾಂತ್ರಿಕ ಕೋರ್ಸ್ ಆಗಿದೆ. ಇದು ಫ್ರಿಜ್, ಎಸಿ, ಮತ್ತು ಕೂಲಿಂಗ್ ಸಿಸ್ಟಮ್‌ಗಳ ಅಳವಡಿಕೆ, ದುರಸ್ತಿ ಮತ್ತು ನಿರ್ವಹಣೆಯನ್ನು ಕಲಿಸುತ್ತದೆ. 10ನೇ ತರಗತಿ ಪಾಸಾದವರು ಈ ಕೋರ್ಸ್ ಸೇರಬಹುದು. ಕೋರ್ಸ್ ವಿವರಗಳು (Course Highlights)ಕೋರ್ಸ್ ಹೆಸರು: ಮೆಕ್ಯಾನಿಕ್ (ರೆಫ್ರಿಜರೇಶನ್ ಮತ್ತು ಏರ್–ಕಂಡೀಷನರ್)ಅವಧಿ: 2 ವರ್ಷ (4 ಸೆಮಿಸ್ಟರ್‌ಗಳು, ತಲಾ 6 ತಿಂಗಳು).ಅರ್ಹತೆ: 10ನೇ ತರಗತಿ ಉತ್ತೀರ್ಣ (ವಿಜ್ಞಾನ ಮತ್ತು ಗಣಿತದೊಂದಿಗೆ).ಪ್ರಮಾಣೀಕರಣ: ಎನ್‌ಸಿವಿಟಿ (NCVT) ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್ (NTC) – ಇದು ಜಾಗತಿಕ ಮಾನ್ಯತೆ ಹೊಂದಿದೆ.ಓಖಕಿಈ ಲೆವೆಲ್: 5. ಪಠ್ಯಕ್ರಮದ ವಿಷಯಗಳು (Syllabus Highlights)ಕೋರ್ಸ್ ಪ್ರಾಯೋಗಿಕ ಜ್ಞಾನಕ್ಕೆ (Trade Practical) ಹೆಚ್ಚು ಒತ್ತು ನೀಡುತ್ತದೆ:ಟ್ರೇಡ್ ಥಿಯರಿ (Trade Theory): ರಿಫ್ರಿಜರೇಶನ್ ಮೂಲ ತತ್ವಗಳು, ಥರ್ಮೋಡೈನಾಮಿಕ್ಸ್, ರಿಫ್ರಿಜರಂಟ್ಸ್, ವಿಂಡೋ ಎಸಿ, ಸ್ಪ್ಲಿಟ್ ಎಸಿ, ಕಾರ್ ಎಸಿ, ಮತ್ತು ಸೆಂಟ್ರಲೈಸ್ಡ್ ಎಸಿ ಸಿಸ್ಟಮ್‌ಗಳು. ಟ್ರೇಡ್ ಪ್ರಾಕ್ಟಿಕಲ್ (Trade Practical): ಲೀಕ್ ಚೆಕ್, ಎಸಿ ಸ್ಥಾಪನೆ (Installation), ಕಂಪ್ರೆಸರ್ ದುರಸ್ತಿ, ಪೈಪಿಂಗ್, ಮತ್ತು ಗ್ಯಾಸ್ ಚಾರ್ಜಿಂಗ್.ಇಂಜಿನಿಯರಿಂಗ್ ಡ್ರಾಯಿಂಗ್ & ವರ್ಕ್‌ಶಾಪ್ ಕ್ಯಾಲ್ಕುಲೇಶನ್: ಊಗಿಂಅ ಲೇಔಟ್ ಮತ್ತು ಕೂಲಿಂಗ್ ಲೋಡ್ ಲೆಕ್ಕಾಚಾರ. ಪ್ರವೇಶ ಮತ್ತು ಶುಲ್ಕ (Admission & Fees)ಸರ್ಕಾರಿ ಐಟಿಐ: ?10,000 – 25,000 (ಅಂದಾಜು).ಖಾಸಗಿ ಐಟಿಐ: ?20,000 – ?60,000 (ಅಂದಾಜು).ಕರ್ನಾಟಕದಲ್ಲಿ ಪ್ರಮುಖ ನಗರಗಳು: ಬೆಂಗಳೂರು (Govt ITI Peenya), ಮೈಸೂರು, ಮಂಗಳೂರು, ಉಡುಪಿ, ಶಿವಮೊಗ್ಗ. ಉದ್ಯೋಗಾವಕಾಶಗಳು (ಎಂಥ ಖಂಟಚಿ)ಎಸಿ ಮತ್ತು ಫ್ರಿಜ್ ಸರ್ವಿಸ್ ಟೆಕ್ನಿಷಿಯನ್‌ಊಗಿಂಅ ಮೆಕ್ಯಾನಿಕ್ಕಂಪ್ರೆಸರ್ ಆಪರೇಟರ್ಸ್ವಂತ ದುರಸ್ತಿ ಅಂಗಡಿ (Self-employment)

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# 2028ರಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಬೇಕಾದರೆ ಅಲ್ಪಸಂಖ್ಯಾತರಿಗೆ ಉಪ ಮುಖ್ಯಮಂತ್ರಿ ಸ್ಥಾನ ಅನಿವಾರ್ಯ: ಮುಜಾಹಿದ್ ಮರ್ಚೆಡ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕದ ಮುಸ್ಲಿಂ ಸಮುದಾಯವು ದಶಕಗಳಿಂದಲೂ ರಾಜ್ಯದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಗತಿಗೆ ಮಹತ್ವದ ಕೊಡುಗೆ ನೀಡುತ್ತಾ ಬಂದಿದೆ. ಆದರೆ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಸಮುದಾಯಕ್ಕೆ ತಕ್ಕ ಮಟ್ಟಿನ ಪ್ರಾತಿನಿಧ್ಯ ಸಿಗುತ್ತಿಲ್ಲ ಎಂಬ ಅಸಮಾಧಾನ ಹೆಚ್ಚುತ್ತಿದೆ ಎಂದು ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗದ ಜಿಲ್ಲಾ ಕಾರ್ಯದರ್ಶಿ ಮುಜಾಹಿದ್ ಮರ್ಚೆಡ್ ತಿಳಿಸಿದ್ದಾರೆ.**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದರೂ, ಅಲ್ಪಸಂಖ್ಯಾತ ಸಮುದಾಯಕ್ಕೆ ರಾಜಕೀಯವಾಗಿ ಗೌರವಯುತ ಸ್ಥಾನಮಾನ



ನೀಡುವಲ್ಲಿ ಇನ್ನಷ್ಟು ಧೈರ್ಯಶಾಲಿ ನಿರ್ಧಾರಗಳ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡುವ ಸಂದರ್ಭ, ಖಾಲಿಯಾಗಲಿರುವ ಉಪ ಮುಖ್ಯಮಂತ್ರಿ ಸ್ಥಾನವನ್ನು ಅಲ್ಪಸಂಖ್ಯಾತರಿಗೆ ಸಾಮಾಜಿಕ ನ್ಯಾಯದಡಿ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಹಿರಿಯ ನಾಯಕ ಬಿ.ಝಡ್.ಝಮೀರ್ ಅಹ್ಮದ್ ಖಾನ್ ಅಥವಾ ಯು.ಟಿ.ಖಾದರ್ ಇವರಲ್ಲಿ ಒಬ್ಬರನ್ನು ಉಪ ಮುಖ್ಯಮಂತ್ರಿಯನ್ನಾಗಿ ನೇಮಕ ಮಾಡುವುದು ಸಮಂಜಸ ಹಾಗೂ ನ್ಯಾಯಸಮ್ಮತ ಕ್ರಮವಾಗುತ್ತದೆ ಎಂದಿದ್ದಾರೆ. ಕಾಂಗ್ರೆಸ್ ಗೆ ಬೆಂಬಲ ನೀಡುತ್ತಿರುವ ಮುಸ್ಲಿಂ ಸಮುದಾಯವು ಚುನಾವಣಾ ಸಂದರ್ಭಗಳಲ್ಲಿ ತನ್ನ ಸಂಖ್ಯಾಬಲವನ್ನು ಪ್ರದರ್ಶಿಸಿದೆ. ಈ ನಿಷ್ಠೆಯನ್ನು ಗೌರವಿಸುವ ನಿಟ್ಟಿನಲ್ಲಿ ಉಪ ಮುಖ್ಯಮಂತ್ರಿ ಸ್ಥಾನವನ್ನು ನೀಡುವುದು ರಾಜಕೀಯವಾಗಿ ಸಹ ಅಗತ್ಯವಾಗಿದೆ. ಸಮುದಾಯದ ವಿಶ್ವಾಸವನ್ನು ಗಟ್ಟಿಗೊಳಿಸಲು ಈ ನಿರ್ಧಾರ ಅತ್ಯಂತ ಮುಖ್ಯವಾಗಿದೆ.

2028ರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ಅಲ್ಪಸಂಖ್ಯಾತರಿಗೆ ಸೂಕ್ತ ಪ್ರಾತಿನಿಧ್ಯ ನೀಡದಿದ್ದರೆ ಅದರ ರಾಜಕೀಯ ಪರಿಣಾಮಗಳನ್ನು ಎದುರಿಸಬೇಕಾಗಬಹುದು ಎಂದು ಮುಜಾಹಿದ್ ಮರ್ಚೆಡ್ ಎಚ್ಚರಿಸಿದ್ದಾರೆ. ಇದಲ್ಲದೆ, ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗವು ವಿವಿಧ ಮುಸ್ಲಿಂ ಸಂಘಟನೆಗಳು, ಧಾರ್ಮಿಕ ಮುಖಂಡರು ಹಾಗೂ ಯುವಕರೊಂದಿಗೆ ಚರ್ಚೆ ನಡೆಸಿದ್ದು, ಈ ಬೇಡಿಕೆ ತೀವ್ರವಾಗಿ ಮುಂದುವರಿದಿದೆ. ಅಲ್ಪ ಸಂಖ್ಯಾತರಿಗೆ ಸಾಮಾಜಿಕ ನ್ಯಾಯ ಕೊಡುವುದು ಕಾಂಗ್ರೆಸ್ ನ ಜವಬ್ದಾರಿಯಾಗಿದೆ. ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ ಮತ್ತು ಗೌರವ ನೀಡುವ ಮೂಲಕ ಮಾತ್ರ ಕಾಂಗ್ರೆಸ್ ಪಕ್ಷ ತನ್ನ ಬದ್ಧತೆಯನ್ನು ನೈಜಗೊಳಿಸಿ, 2028ರಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಾಗುತ್ತದೆ ಎಂದು ಮುಜಾಹಿದ್ ಮರ್ಚೆಡ್ ಪತ್ರಿಕಾ ಹೇಳಿಕೆ ಮೂಲಕ ಒತ್ತಾಯಿಸಿದ್ದಾರೆ.

# ಮಹಿಳೆಯರಲ್ಲಿ ಮುಟ್ಟು ಸಹಜ ಪ್ರಕ್ರಿಯೆ ಹೊರತು ಅದು ದೋಷಿತ ಕಳಂಕವಲ್ಲ: ಡಾ.ಅಯ್ಯನಗೌಡ

ನೈಜ್ಯ ದೆಸೆ ನ್ಯೂಸ್

**ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ಯ ಕಾರ್ಯಕ್ರಮದ ಅಡಿಯಲ್ಲಿ ನಡೆಯುತ್ತಿರುವ ವಿಶ್ವಋತು ಚಕ್ರ ನೈರ್ಮಲ್ಯ ದಿನಾಚರಣೆಯ ಕಾರ್ಯಕ್ರಮವನ್ನು ಮುಟ್ಟಿನ ಸ್ನೇಹಿತ ಪ್ರಪಂಚಕ್ಕಾಗಿ ಎಲ್ಲರೂ ಒಗೋಣ ಎಂಬ ಘೋಷವಾಕ್ಯ ಹೇಳುತ್ತಾ ಮಹಿಳೆಯರಿಗೆ ಕಾಲೇಜಿನ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ಸೇವನೆ ಋತುಚಕ್ರ ನೈರ್ಮಲ್ಯದ ಅರಿವು ಮತ್ತು ಜಾಗೃತಿ ಬಗ್ಗೆ ತಿಳಿಸಿ, ಜೊತೆಗೆ ಮಹಿಳೆಯರಲ್ಲಿರುವ ಋತುಚಕ್ರದ ಸಂಬಂಧಿ ಸಮಸ್ಯೆಗಳ ಗೊಂದಲಗಳ ನಿವಾರಣೆಯ ಕು–ರಿತು ತಾಲೂಕು ವೈದ್ಯಾಧಿಕಾರಿ ಡಾ.ಅಯ್ಯನಗೌಡ ಆರೋಗ್ಯ ಜಾಗೃತಿಯನ್ನು ಮೂಡಿಸಿದರು.**

ನಗರದ ಸನ್ ರೈಸ್ ಶಿಕ್ಷಣ ಸಂಸ್ಥೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ತಾಲೂಕಾರೋಗ್ಯ ಅಧಿಕಾರಿಗಳ ಕಚೇರಿ, ಮತ್ತು ತಾಲೂಕು ಸಾರ್ವಜನಿಕ ಆಸ್ಪತ್ರೆ ಸಿಂಧನೂರು, ಹಾಗೂ ನಗರದ ಸನ್ ರೈಸ್ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಮೇ.29 ರಂದು ವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಂಡು ಮಾತನಾಡಿದ ಅವರು, ಜಿಲ್ಲಾ



ಮಾನಸಿಕ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿನ ಸ್ಕಿಜೋ ಫ್ರೀನೀಯ ಕಾಯಿಲೆ ಕುರಿತು ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯದ ಸದೃಢತೆ ಕಾಪಾಡಿಕೊಳ್ಳುವಲ್ಲಿ ಕಾಳಜಿ ವಹಿಸಬೇಕೆಂದರು.

ಜಿಲ್ಲಾ ಮಾನಸಿಕ ಆರೋಗ್ಯ ಸಮಾಲೋಚಕ ಅರುಣ್ ಕುಮಾರ ಕೆ, ವಿ.ಬಿ.ಡಿ.ಟಿ. ಎಸ್ ಮೇಲ್ವಿಚಾರಕ ಎಫ್.ಎ.ಹಣಗಿ, ಎಲ್. ಎನ್.ಆರ್.ಕೆ.ಎಸ್.ಕೆ ಆಪ್ತ ಸಮಾಲೋಚಕ ರಾಮನುಜನ್ ಕುಮಾರ ವಿಶ್ವ ಋತುಚಕ್ರ ನೈರ್ಮಲ್ಯ ದಿನವನ್ನು ಉದ್ದೇಶಿಸಿ ರಾಷ್ಟ್ರೀಯ ಕಿಶೋರ್ ಸ್ವಾಸ್ಥದಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಟ್ಟಿನ ಸ್ನೇಹಿತ ಪ್ರಪಂಚಕ್ಕಾಗಿ ಹೋಗೋಣ ಎಂಬ ಘೋಷವಾಕ್ಯವನ್ನು ಹೇಳುತ್ತಾ ಋತುಚಕ್ರದ ವೇಳೆ ನೈರ್ಮಲ್ಯ ಕಾಪಾಡದಿದ್ದರೆ, ಏನಾಗುತ್ತದೆಂಬದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಯುಟಿಐ, ಆರ್‌ಟಿಐ, ಟಿಟಿಎಸ್ ಬಂಜೆತನ, ಪಿಐಡಿ ಹಾಗೂ ಇತರೆ ಅನೇಕ ಸಮಸ್ಯೆಗಳು ಮುಟ್ಟಿನ ನೈರ್ಮಲ್ಯ ಇಲ್ಲದೆ ಇರುವುದರಿಂದ ಆಗುವ ಸಂಭವಗಳು ಜಾಸ್ತಿ ಇರುತ್ತದೆ ಎಂದು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ, ಸ್ನೇಹ ಕ್ಲಿನಿಕ್ ಸೇವಾ ಸೌಲಭ್ಯ ಕುರಿತು ಹಾಗೂ ಋತುಚಕ್ರ ಸಂಬಂಧ ಸಮಸ್ಯೆಗಳ ನಿವಾರಣೆ ಬಗ್ಗೆ ವಿವರಿಸಿದರು. ನಂತರ ತಾಲೂಕು ಬಿಎಚ್‌ಇಓ ಅಧಿಕಾರಿ ಗೀತಾ ಹಿರೇಮಠ ಮಾತನಾಡಿ, ಮುಟ್ಟಿನ ನೈರ್ಮಲ್ಯ ದಿನದ ಅಂಗವಾಗಿ ಮುಟ್ಟಿನ ಸ್ನೇಹಿತರಿಗೆ ಪರಿಸರ ನಿರ್ಮಾಣ ಮಾಡುವುದು ಮುಟ್ಟಿನ ಅವಧಿಯಲ್ಲಿ ಪಾಲಿಸಬೇಕಾದ ಕ್ರಮಗಳ ಕುರಿತು ಸಣ್ಣ ವಯಸ್ಸಿನಿಂದಲೇ ಅರಿವು ಮೂಡಿಸುವುದು ಮುಟ್ಟಿನ ಉತ್ಪನ್ನಗಳು ಸುಲಭವಾಗಿ ದೊರೆಯುವಂತೆ ವ್ಯವಸ್ಥೆ ಕಲ್ಪಿಸುವುದು,

ಮುಟ್ಟಿನ ಸ್ನೇಹಿತ ಮುಟ್ಟಿಗೆ ಸಂಬಂಧಿಸಿದ ಸೂಕ್ತ ಆರೋಗ್ಯ ಸೇವೆಗಳನ್ನು ಒದಗಿಸುವುದು ಈ ಎಲ್ಲ ವಿಷಯಗಳ ಬಗ್ಗೆ ಹಾಗೂ ವಿದ್ಯಾರ್ಥಿಗಳಲ್ಲಿರುವ ಗೊಂದಲಗಳ ನಿವಾರಣೆಯ ಕುರಿತು ಮಾಹಿತಿ ನೀಡಿದರು. ಇದೇ ವೇಳೆ: ಎಸ್.ಟಿ.ಎಸ್ ಅಧಿಕಾರಿ ಯಮನೂರಪ್ಪ ಸಂಸ್ಥೆಯ ಉಪಾಧ್ಯಕ್ಷ ಇರ್ಷಾದ್, ಪ್ರಾಚಾರ್ಯ ಸೀರಿಲ್, ಸುರೇಶ ರೆಡ್ಡಿ, ಗಂಗಮ್ಮ, ಮಂಜುಳಾ, ಕಾಲೇಜಿನ ವಿದ್ಯಾರ್ಥಿಗಳು, ಉಪಸ್ಥಿತರಿದ್ದರು.




OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.